ಬಸ್ ದರ ಏರಿಕೆ ಬಗ್ಗೆ ಚರ್ಚೆ

+ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ ನಿನ್ನೆ ಎಲ್ಲಾ ವಿರೋಧಪಕ್ಷದ ಮುಖಂಡರು ಮತ್ತು ಆ ಕಡೆ ಇರತಕ್ಕಂಥಾ ಎಲ್ಲಾ ಶಾಸಕರು ಕೂಡ ಆ ಬಸ್ಸು ದರ ಏರಿಕೆ ಬಗ್ಗೆ ಧರಣಿಯನ್ನು ನಾವು ಪ್ರಾರಂಭ ಮಾಡಿದ್ದೇವೆ. ಬಹುಶಃ 5 ಗಂಟೆಯಿಂದ 10 ಗಂಟೆಯವರೆಗೂ ನಾವು ಇಲ್ಲೇ ಕುಳಿತಿದ್ದೇವೆ. 10 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಬಂದು ಅಂದರೆ ಈ ಬಸ್ಸು ದರದಲ್ಲಿ ಏನು ವ್ಯತ್ಯಾಸ ಆಗಿದೆ ಅದನ್ನು ನಾನು ಸಾಧ್ಯವಾದಷ್ಟು ಮಟ್ಟಿಗೆ ಸರಿಪಡಿಸುತ್ತೇನೆ, ಅದರಲ್ಲಿ ಸ್ವಲ್ಪ ವ್ಯತ್ಯಾಸಗಳು ಆಗಿವೆ, ಅದಕ್ಕಾಗಿ ತಾವು ಧರಣಿ ಮಾಡತಕ್ಕಂಥ ಅವಶ್ಯಕತೆ ಇಲ್ಲ, ಖಂಡಿತವಾಗಿ ನಾನು ನಾಳೆ ಒಂದು ತೀರ್ಮಾನಕ್ಕೆ ಬಂದು ಅನೌನ್ಸ್ ಮಾಡುತ್ತೇನೆಂದು ಹೇಳಿದರು. ಅದಕ್ಕೆ ನಮ್ಮ ಎಲ್ಲಾ ಪಕ್ಷಗಳ ಮುಖಂಡರ ವತಿಯಿಂದ ನಾವು ಎಲ್ಲಾರೂ ಕೂಡ ಎರಡು ಮೂರು ಸಲ ಅವರ ಕೊಠಡಿಯಲ್ಲಿ ಚರ್ಚೆ ಮಾಡಿದ್ದೇವೆ. ತದನಂತರ ಕೊನೆಯದಾಗಿ ಮಾನ್ಯ ನಂಜೇಗೌಡರು, ವಾಟಾಳ್ ನಾಗರಾಜ್ ಅವರು, ಕಾಗೋಡು ತಿಮ್ಮಪ್ಪನವರು, ನಮ್ಮ ಮಾನ್ಯ ಜಯಚಂದ್ರರವರು ಕೂಡ ಹೋಗಿ ಮಾತುಕತೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದಾರೆ ಎನ್ನತಕ್ಕಂಥ ವರ್ತಮಾನ ನಮಗೆ ಈಗ ಬಂದಿದೆ. ಅದರೆ ಎಂದು ಆಧಾರದ ಮೇಲೆ ನಾವು ಏನು ನಿನ್ನೆ ಧರಣಿ ಮಾಡುತ್ತಿದ್ದೇವೆ ಅದಕ್ಕೆ ಇಲ್ಲಿ ಅವರ ಮಾತನ್ನು ಕೇಳಬೇಕು ಎಂದು ಹೇಳಿ ಇಲ್ಲಿ ನಾವು ಬಂದ್ದು, ಕುಳಿತಿದ್ದೇವೆ. ಬಹುಶಃ ಅವರು ತೆಗೆದುಕೊಂಡಂತಹ ತೀರ್ಮಾನವನ್ನು ಜನರು ಮೆಚ್ಚಬಹುದು ಎನ್ನತಕ್ಕಂಥ ಆಸೆಯಿಂದ ಇವತ್ತಿನದಿವಸ ನಾವೆಲ್ಲರೂ ಸಹ ಅವರ ತೀರ್ಮಾನವನ್ನು ಕೇಳಲು ಕುಳಿತಿದ್ದೇವೆ. ತಾವು ಸಹ ಈ ವಿಷಯದಲ್ಲಿ ಸಾಕಷ್ಟು ತಾಳ್ಮೆಯಿಂದ ಆಸಕ್ತಿ ವಹಿಸಿ ಈ ಒಂದು ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳಿ ಇದುವರೆಗೂ ಸಹ ಬೆಲ್ ಹಾಕಿಲ್ಲ. ಈಗ ಬೆಲ್ ಹಾಕಿದಿರಿ. ಬಹುಶಃ ಈಗ ಸಮಸ್ಯೆ ತೀರ್ಮಾನ ಆಗಬಹುದು, ಸಮಾಧಾನಕರವಾದ ನಿರ್ಣಯ ಬರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ತಮ್ಮ ಕಡೆಯಿಂದ ಆ ನಿರ್ಣಯ ಬಂದ ಮೇಲೆ ಪುನಃ ನಾವು ಅದರ ಮೇಲೆ ಯಾವ ರೀತಿಯ ಮಾತು ಹೇಳಬೇಕೋ ಅದನ್ನು ಹೇಳುತ್ತೇವೆ. ಆದ್ದರಿಂದ ಅವರು ದಯವಿಟ್ಟು ತಮ್ಮ ಪ್ರಸ್ತಾವನೆಯನ್ನು ಸದನದ ಮುಂದೆ ಮಂಡಿಸಬೇಕು ಎಂದು ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಮ್ಮ ಸಹಕಾರದಿಂದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಾರಿಗೆ ಸಚಿವರು ಪ್ರತಿಪಕ್ಷದ ನಮ್ಮ ಎಲ್ಲಾ ಪ್ರಮುಖರ ಮಾತುಗಳನ್ನು ಕೇಳಿ ಬೆಳಿಗ್ಗೆಯಿಂದ ಬಾರಿ ಮಾತುಕತೆಗಳು ಆಯಿತು. ನಿನ್ನೆ ಬಹಳ ತಡವಾಗಿದ್ದರೂ ಸಹ 10 ಗಂಟೆ ದಾಟಿದ್ದರೂ ಸಹ ಮಾನ್ಯ ಮುಖ್ಯಮಂತ್ರಿಗಳು ಬಂದು ನಾಳೆ ಪರಸ್ಪರ ನಾವೆಲ್ಲ ಕುಳಿತು ಇದಕ್ಕೆ ಒಂದು ಪರಿಹಾರ ಹುಡುಕೋಣ ತಾವು ಇಲ್ಲಿ ಧರಣಿ ಕುಳಿತುಕೊಳ್ಳುವ ಅವಶ್ಯಕತೆ ಇಲ್ಲ ಎಂದು ಹೇಳಿದ ಮೇಲೆ ನಾವೆಲ್ಲ ಅವರ ಮಾತಿಗೆ ಒಪ್ಪಿ ಧರಣಿಯನ್ನು ವಾಪಸ್ಸು ಪಡೆದ ರೀತಿಯಲ್ಲಿಯೇ ನಾವು ವಾಪಸ್ಸು ಪಡೆದೆವು. ಆ ನಂತರ ನಮ್ಮ ಮನೆಗಳಿಗೆ ನಾವು ತೆರಳಿದೆವು. ಆದರೆ ಇವತ್ತು ಸರ್ಕಾರ ಯಾವುದೇ ಒಂದು ಒಣ ಪ್ರತಿಷ್ಠೆಗೆ ನಿಲ್ಲದೇ ನಾವು ಪ್ರತಿಪಕ್ಷದಲ್ಲಿ ಇದ್ದವರು ರಾಜ್ಯದ ಜನರ ಹಿತದೃಷ್ಟಿಯಿಂದ

ಒಂದಾಗಿ ಈ ಬಸ್ಸು ದರ ತುಂಬಾ ಜಾಸ್ತಿಯಾಗಿದೆ ಇದನ್ನು ಕಡಿಮೆ ಮಾಡಬೇಕೆಂದು ನಾವು ಕೆಲವು ಸಲಹೆಗಳನ್ನು ಕೊಟ್ಟಿದ್ದೇವೆ. ನಮ್ಮ ಬೇಡಿಕೆ ಪೂರ್ಣ ಈಡೇರದೇ ಇರಬಹುದು. ನಾವು ಇಲ್ಲಿ ಕುಳಿತು ಎಷ್ಟು ಕಡಿಮೆ ಮಾಡಲು ಸಾಧ್ಯವೋ ಅಷ್ಟು ಕಡಿಮೆ ಮಾಡಬೇಕೆಂದು ಒತ್ತಾಯ ಮಾಡುವುದು ಸ್ವಾಭಾವಿಕ. ಆದರೆ ಸರ್ಕಾರ ನಡೆಸುವವರು ಇದರ ಬಗ್ಗೆ ಚಿಂತನೆ ಮಾಡಿ ಒಮ್ಮತದಿಂದ ಒಂದು ಅಭಿಪ್ರಾಯಕ್ಕೆ ಬಂದು ಮುಖ್ಯಮಂತ್ರಿಗಳು ಏನು ರಿಯಾಯಿತಿ ಕೊಡಬೇಕು ಎಂದು ನಮ್ಮ ಒತ್ತಾಯಕ್ಕೆ ಮಣಿದು ಅವರು ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಬಹುಶಃ ಅವರು ಅದನ್ನು ಪ್ರಕಟ ಮಾಡಬಹುದು. ಈ ಸಂದರ್ಭದಲ್ಲಿ ಅವರು ಏನೊಂದು ಪರಿಹಾರ ಕೊಡುತ್ತಾರೆ ಅದನ್ನು ಅವರು ಪ್ರಕಟ ಮಾಡುತ್ತಾರೆ ಬಹುಶಃ ನಾವು ಮತ್ತೊಮ್ಮೆ ಧರಣಿಗೆ ಬರದ ರೀತಿಯಲ್ಲಿ ಒಳ್ಳೆಯ ರೀತಿಯಲ್ಲಿ ನಾವು ಏನು ಮಾತುಕತೆ ಮಾಡಿದ್ದೇವೆ ಅದನ್ನು ಈ ಕ್ಷಣದಿಂದಲ್ಲೇ ಜಾರಿಗೆ ತರುವ ರೀತಿಯಲ್ಲಿ ಏನೇನು ರಿಯಾಯಿತಿ ಕೊಟ್ಟಿದ್ದಾರೆ ಅದನ್ನು ಪ್ರಕಟ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಸರ್ಕಾರಕ್ಕೂ ಸಹ ಒಳ್ಳೆಯ ರೀತಿಯಲ್ಲಿ ಸಹಕಾರ ನೀಡಿದ್ದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಾವು ವಿವರವನ್ನು ಕೊಟ್ಟ ನಂತರ ಅಗತ್ಯ ಇದ್ದರೆ ಕೆಲವು ವಿವರಗಳನ್ನು ಪ್ರಯತ್ನಪಡುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಸಾಮಾನ್ಯವಾಗಿ ಇದುವರೆಗೂ ಮಾತುಕತೆಗಳು ನಡೆದಿರತಕ್ಕಂಥಾದ್ದು ಅಧ್ಯಕ್ಷರ ಕಾರ್ಯಾಲಯದಲ್ಲಿ, ಇತ್ತೀಚೆಗೆ ಸಂಪ್ರದಾಯ ಏನೋ ಸ್ವಲ್ಪ ಬದಲಾವಣೆ ಆಗಿದೆ. ಅದಕ್ಕೆ ತಾವು ಹೇಳಿದಿರಿ ಸರ್ಕಾರ ನೀವು ಮಾತುಕತೆ ಆಡಿಕೊಳ್ಳಿ ಎಂದು ಆದರೆ ನಮಗಾಗಲಿ ಅಥವಾ ಸರ್ಕಾರಕ್ಕೆ ಆಗಲಿ ಆ ಮಾತುಕತೆಯಿಂದ ಅಷ್ಟು ಸಂತೋಷ ಏನೂ ಇಲ್ಲ. ಇವತ್ತು ಏನೊ ಆಗಿದೆ, ಇಂತಹ ಸಂಪ್ರಾದಾಯ ಇನ್ನು ಮುಂದೆ ಮುರಿದು ಹೋಗಬಾರದು. ಈ ಸದನದ್ದು ತಮ್ಮ ಕಾರ್ಯಾಲಯದಲ್ಲಿ ನಡೆಯಬೇಕು. ಆ ಸದನದ್ದು ಸಭಾಪತಿಗಳ ಕಾರ್ಯಾಲಯದಲ್ಲಿ ನಡೆಯಬೇಕು. ಅದರಿಂದ ಆ ರೀತಿ ಏನಾದರೂ ಆಗಿದ್ದರೆ ನಮಗೆ ಅತ್ಯಂತ ನೋವಾಗಿದೆ. ಆ ಬಗ್ಗೆ ತಮಗೂ ನಾನು ಹೇಳುತ್ತೇನೆ. ತಾವು ಯಾವ ಕಾರಣಕ್ಕೂ ತಮ್ಮ ಕಾರ್ಯಾಲಯದಲ್ಲಿ ನಡೆಯತಕ್ಕಂಥಾ ಚರ್ಚೆಗಳನ್ನು ಬೇರೆ ಕಡೆ ಕಳುಹಿಸತಕ್ಕಂಥಾದ್ದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನಾನು ನಾಲ್ಕು ಒಳ್ಳೆಯ ಮಾತುಗಳನ್ನು ಹೇಳುತ್ತೇನೆ. ಅವರು ಒಂದು ರೀತಿಯಲ್ಲಿ ಧಾರಾಳವಾಗಿದ್ದಾರೆ. ಈ ಮಾತನ್ನು ನಾನು ಪ್ರಾಮಾಣಿಕವಾಗಿ ಹೇಳಬೇಕಾಗುತ್ತದೆ. ಅದಕ್ಕೆ ಕಾರಣ, ನಿನ್ನೆಯಿಂದ ಈ ಒಂದು ಪರಿಸ್ಥಿತಿಯನ್ನು ತಿಳಿ ವಾತಾವರಣಕ್ಕೆ ತರಬೇಕು, ಬಸ್ಸು ದರ ಏರಿಕೆ ಬಗ್ಗೆ ಇಲ್ಲಿ ಏನು ರಾಜ್ಯದ ಜನತೆಯ ಬೇಡಿಕೆಗಳನ್ನು ಮಂಡಿಸಿ ನಾವು ಧರಣಿ ಮಾಡುತ್ತಿದ್ದೇವೋ ನಮ್ಮ ಬೇಡಿಕೆಗಳಿಗೆ, ನಮ್ಮ ಧರಣಿಗೆ ಸ್ಪಂದಿಸಿ ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನೆಲ್ಲಾ ಕರೆದು ಮಾತುಕತೆ ಮಾಡಿ ನಾಳೆ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡುತ್ತೇನೆಂದು ಹೇಳಿದರು. ಈ ಒಂದು ವಾತಾವರಣವನ್ನು ನಿರ್ಮಾಣ ಮಾಡಲು ನಾನು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ರಾತ್ರಿ 3-4 ಬಾರಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಒಂದು ಒಳ್ಳೆಯ ವಾತಾವರಣಕ್ಕೆ ಬರಬೇಕು ಎಂದು ಹೇಳಿ ಬೆಳಿಗ್ಗೆ ವಿರೋಧಪಕ್ಷಗಳ ಮುಖಂಡರು ಮಾನ್ಯ ವಿರೋಧಪಕ್ಷದ ನಾಯಕರ ಕೊಠಡಿಯಲ್ಲಿ ಸಭೆ ಸೇರಿ ಮಾತುಕತೆ ಮಾಡಿಕೊಂಡು ನಂತರ ಮುಖ್ಯಮಂತ್ರಿಗಳ ಕೊಠಡಿಗೆ ಹೋದೆವು. ಆ ಸಭೆಯಲ್ಲಿಯೂ

ಸಹ ನಮ್ಮ ಬೇಡಿಕೆಯನ್ನು ಈಡೇರಿಸುವಂತಹ ಲಕ್ಷಣ ಕಾಣಲಿಲ್ಲ. ತದನಂತರ ಇವತ್ತು ಬೆಳಿಗ್ಗೆಯಿಂದ ನಾನು ಮತ್ತು ನಮ್ಮ ಸ್ನೇಹಿತರಾದ ಮಾನ್ಯ ನಂಜೇಗೌಡರು ಹತ್ತಾರು ಬಾರಿ ಭೇಟಿ ಮಾಡಿ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರ ಇದನ್ನು ಒಂದು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳಬಾರದು, ಇದರ ಬಗ್ಗೆ ಒಂದು ಪ್ರಾಮಾಣಿಕವಾದ ಚಿಂತನೆ ಆಗಬೇಕು ಎಂದು ಹೇಳಿದೆವು. ನಮ್ಮ ಜೊತೆಯಲ್ಲಿ ಜಯಚಂದ್ರರವರು ಇದ್ದರು, ಕಾಗೋಡು ತಿಮ್ಮಪ್ಪನವರು ಇದ್ದರು, ಅನೇಕ ಜನ ಬಂದು ಬಹಳ ಸಹಕಾರ ಮಾಡಿದ್ದಾರೆ. ಜೊತೆಗೆ ಸಾರಿಗೆ ಸಚಿವರು, ಪ್ರಕಾಶ್‌ರವರು, ನ್ಯಾಯಾಂಗ ಸಚಿವರು ಮತ್ತು ಉಪ ಮುಖ್ಯಮಂತ್ರಿಗಳು ಈ ಮಾತುಕತೆಗಳಲ್ಲಿ ಭಾಗಿಗಳಾಗಿದ್ದರು. ನಾನು ಅವರೆಲ್ಲರನ್ನೂ ಅಭಿನಂದಿಸುತ್ತೇನೆ. ಆದರೂ ಸರ್ಕಾರ ಯಾವುದೋ ಒಂದು ದರವನ್ನು ಇಳಿಸತಕ್ಕಂಥ ನಿರ್ಧಾರಕ್ಕೆ ಬಂದಿದ್ದಾರೆ. ಆದರೆ ಅದು ನಮಗೆ ಸಂತೋಷ ಎನ್ನುವಷ್ಟು ಆಗದೇ ಇದ್ದರೂ ಅವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳಿಕೊಂಡು ಆಮೇಲೆ ಅದರ ಬಗ್ಗೆ ಮುಂದೆ ಏನು ಎನ್ನುವುದನ್ನು ನಾವು ತೀರ್ಮಾನ ಮಾಡೋಣ. ಒಂದು ಹಂತದಲ್ಲಿ ಅತ್ಯಂತ ಹೆಚ್ಚಿನ ರೀತಿಯಲ್ಲಿ ದರವನ್ನು ಸರ್ಕಾರ ಏರಿಸಿದೆ. ಅದಕ್ಕೆ ಅವರು ಕೊಟ್ಟಿರತಕ್ಕಂಥಾ ಅನೇಕ ಕಾರಣಗಳು ಇವೆ, ಆದರ ಬಗ್ಗೆ ನಿನ್ನೆ ನಾವು ಚರ್ಚೆ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಸರ್ಕಾರ ನಮ್ಮೆಲ್ಲರ ಒತ್ತಾಯಕ್ಕೆ, ವಿರೋಧಪಕ್ಷಗಳ ಧರಣಿಕ್ಕೆ ತಮ್ಮ ಪ್ರತಿಷ್ಠೆಯನ್ನು ಮಾಡಿಕೊಳ್ಳದೆ ಸರ್ಕಾರದ ನಿಲುವು ಏನು, ಎಷ್ಟು ದರವನ್ನು ಇಳಿಸಿದ್ದೇವೆ ಎನ್ನತಕ್ಕಂಥಾದ್ದನ್ನು ಈ ಸದನದಲ್ಲಿ ಪ್ರಕಟಿಸಬೇಕು ಎಂದು ನಾನು ಅಂದುಕೊಂಡಿದ್ದೇನೆ. ನನಗೆ ಅನಿಸುತ್ತದೆ, ಮುಂದೆ ಅವರು ದರವನ್ನು ಪ್ರಕಟಿಸಿದ ಮೇಲೆ ಮತ್ತೆ ಚಳುವಳಿಗೆ ಇಳಿಯುವಂತಹ ಅವಕಾಶವನ್ನು ಅವರು ಕಲ್ಪಿಸುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿ, ಆ ದೃಷ್ಟಿಯಿಂದ ಸರ್ಕಾರ ತನ್ನ ನಿರ್ಧಾರವನ್ನು ಪ್ರಕಟಿಸಬೇಕು ಎಂದು ನಾನು ಕಳಕಳಿಯಿಂದ ವಿನಂತಿ ಮಾಡುತ್ತಿದ್ದೇನೆ.

+ಶ್ರೀ ಎಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ಹಾಗೂ ಮುಖ್ಯಮಂತ್ರಿಗಳಲ್ಲಿ ಹಾಗೂ ವಿರೋಧಪಕ್ಷದ ನಾಯಕರಲ್ಲಿ ಒಂದು ವಿನಂತಿ ಮಾಡಬೇಕು ಎಂದು ನಿಂತಿದ್ದೇನೆ. ನಾನು ನಿನ್ನೆ ಹುಷಾರಿಲ್ಲದೇ ಇದ್ದುದರಿಂದ ಮನೆಗೆ ಹೋಗಿದ್ದೆ. ಬಂದಾಗ ಗೊತ್ತಾಯಿತು, ತಾವು ಈ ಸಭೆಯನ್ನು ಏರ್ಪಡಿಸಿಲ್ಲ, ಸರ್ಕಾರದವರು ಮತ್ತು ವಿರೋಧಪಕ್ಷದವರೇ ಮಾತನಾಡಿಕೊಳ್ಳಲಿ ಎಂದು ಬಿಟ್ಟು ಬಿಟ್ಟಿದ್ದಾರೆ ಎಂದು. ನಾನು ನಿಮ್ಮಲ್ಲಿಗೆ ಬಂದೆ. ಏಕೆ ಈ ರೀತಿ ಮಾಡಿದ್ದೀರಿ, ಇದು ಸಂಪ್ರದಾಯ ಅಲ್ಲ. ಲೋಕಸಭೆಯಲ್ಲಿ ಏನಾಗುತ್ತದೆ ಅಂದರೆ, ಹಲವಾರು ಬಾರಿ ಅಧ್ಯಕ್ಷರು, ಮಾತುಕತೆಗಳಲ್ಲಿ ಭಾಗಿ ಆಗುವುದಿಲ್ಲ. ಆದರೆ ಮಾತುಕತೆಗೆ ಅವರು ಸೇರಿಸಿಬಿಟ್ಟು ಕಾಫಿ ತಿಂಡಿ ಎಲ್ಲಾ ಏರ್ಪಾಡು ಮಾಡಿ ನೀವು ಮಾತನಾಡಿಕೊಳ್ಳಿ, ನಾನು ಪಾಲುದಾರನಾಗುವುದಿಲ್ಲ ಎಂದು ಹೇಳಿ ಹೊರಟು ಹೋಗುತ್ತಾರೆ. ಈ ಸಭೆಯ ವ್ಯವಸ್ಥೆಗಳು, ವ್ಯವಹಾರಗಳು ಏನಿದ್ದರೂ ಈ ಸದನದ ಆಜೂಬಾಜಿನಲ್ಲಿಯೇ ನಡೆಯಬೇಕಾಗುತ್ತದೆ. ಇದನ್ನು ಬಿಟ್ಟು ನಾವು ಏನು ಜ್ಯೂರಿಸ್‌ಡಿಕ್ಷನ್ ಬಿಟ್ಟು ಹೊರಗೆ ಹೋಗತಕ್ಕಂಥಾದ್ದು ಸತ್ಸಂಪ್ರದಾಯ ಆಗುವುದಿಲ್ಲ. ಅದನ್ನು ಮುಖ್ಯಮಂತ್ರಿಗಳ ಕೊಠಡಿಗೆ ಹೋದಾಗ ನಾನು ವಿನಂತಿಸಿಕೊಂಡೆ. ಬಹುಶಃ ನೀವು ಏರ್ಪಾಡು ಮಾಡಿರುತ್ತೀರೋ ಇಲ್ಲವೋ ಎಂದು ನಾವು ಶಿಫ್ಟ್ ಮಾಡಲಿಲ್ಲ. ಆದರೆ ತಮಗೆ ಕೊನೆ ಪಕ್ಷ ಇವರನ್ನು ಸೇರಿಸಿ ಮಾತುಕತೆಗೆ ಕೂರಿಸುವಷ್ಟಾದರೂ ಹೊಣೆಗಾರಿಕೆ ಇರಬೇಕಾಗಿತ್ತು.

ಕೆಲವೊಂದರಲ್ಲಿ ತಾವು ಭಾಗವಹಿಸದೇ ಇರತಕ್ಕಂಥಾದ್ದು ಇರಬಹುದು. ಏಕೆಂದರೆ, ಇದರ ಜ್ಯೂರಿಸ್‌ಡಿಕ್ಷನ್ ಬಿಟ್ಟು ಹೊರಗೆ ಹೋಗಿ ಈ ಸದನದ ವ್ಯವಹಾರಗಳಲ್ಲಿ ಕಲಾಪಗಳಲ್ಲಿ ಬಂದಂಥಾದ್ದನ್ನು ಚರ್ಚೆ ಮಾಡತಕ್ಕಂಥಾದ್ದು ಅದು ಸಂಪ್ರದಾಯ ಆಗುವುದಿಲ್ಲ ಎನ್ನುವಂತಹ ಒಂದು ಮಾತನ್ನು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಬಹುಶಃ ಎಲ್ಲಾ ಸರ್ಕಾರಗಳು ಏನು ಮಾಡುತ್ತವೆ ಅಂದರೆ 20ರಷ್ಟು ಹೆಚ್ಚಿಸಿ ಆಮೇಲೆ 10ರಷ್ಟು ಇಳಿಸುತ್ತಾರೆ. ನಮಗೆ ಸಂತೋಷ ಆಗದೇ ಇರುವಷ್ಟು ಎಷ್ಟೋ ಒಂದಷ್ಟು ಏರಿಸುವುದು ಆಮೇಲೆ ಇಳಿಸುವುದು, ಏನೋ ಒಂದು ಮಾಡತಕ್ಕಂಥ ವ್ಯವಸ್ಥೆ. ಈಗ ಕಾಲ ವ್ಯಯ ಮಾಡಿ ಏನು ಚರ್ಚೆ ಮಾಡಿದ್ದೇವೆ ಅದನ್ನು ಇಲ್ಲಿ ಪ್ರಕಟಿಸುತ್ತಾರೆ. ನಾನು ಪುನಃ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಇದು ಸುಖಾಂತವಾಗಿ ಮುಕ್ತಾಯಗೊಂಡಿದೆ. ಅದಕ್ಕೆ ಧನ್ಯವಾದ ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೆ, ಸಂಪ್ರದಾಯದ ಪ್ರಕಾರ ತಮ್ಮ ಗಮನಕ್ಕೆ ಬಾರದೆ ಯಾವುದೇ ಕೆಲಸವಾಗುವುದಕ್ಕೆ ಸಾಧ್ಯವಿಲ್ಲ. ಸರ್ಕಾರವೇ ಆಗಲೀ, ವಿರೋಧ ಪಕ್ಷಗಳೇ ಆಗಲೀ, ಏನಾದರೂ ಮಾತನಾಡಿಕೊಂಡರೆ ಕೊನೆಗೆ ಅದು ತಮ್ಮ ಗಮನಕ್ಕೆ ಬರಬೇಕೇ ಹೊರತು ತಮ್ಮನ್ನು ಬಿಟ್ಟು ಈ ಸದನದ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಆದರೆ ನಿನ್ನೆ ದಿವಸ ನಾನು ವಿರೋಧ ಪಕ್ಷದ ನಾಯಕರುಗಳಲ್ಲಿ ವಿನಂತಿ ಮಾಡಿಕೊಂಡು ನಾವು ಕುಳಿತುಕೊಂಡು ಮಾತನಾಡೋಣ, ಇದರಲ್ಲಿ ಏನಾದರೂ ಬದಲಾವಣೆ ಮಾಡುವುದಕ್ಕೆ ಸಾಧ್ಯವಿದ್ದರೆ ಮಾನ್ಯ ಅಧ್ಯಕ್ಷರ ಪರ್ಮಿಷನ್ ತೆಗೆದುಕೊಂಡು ಮಾಡೋಣವೆಂದು ಹೇಳಿದ್ದೆ. ಆಗ ಅದರ ವಾತಾವರಣವೇ ಬೇರೆ ಇದ್ದುದರಿಂದ ಅದನ್ನು ಪುನರ್ ಉಚ್ಚರಿಸುವ ಅವಶ್ಯಕತೆ ಇಲ್ಲ. ಆ ನಂತರ ಕಾಗೋಡು ತಿಮ್ಮಪ್ಪನವರು, ವಾಟಾಳ್ ಅವರು, ನಂಜೇಗೌಡರು, ಯಡಿಯೂರಪ್ಪನವರು, ಖಿರ್ಗೆಯವರು ಮತ್ತು ನಾವು ಸೇರಿಸಿಕೊಂಡು ಮಾಡಿದ್ದೇನೆಂದರೆ, ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದ ಒಬ್ಬ ರೋಗಿ, ಅವನು ಈಗಲೋ ಆಗಲೋ ಸಾಯುತ್ತಾನೆಂದು ಇತ್ತು, ಅವನನ್ನು ಉಳಿಸುವುದು ಹೇಗೆ? ಔಷಧಿ ಎಲ್ಲಿಂದ ತರಬೇಕು? ಯಾರು ರಕ್ತ ದಾನ ಮಾಡಬೇಕು? ಆ ಕೆ.ಎಸ್.ಆರ್.ಟಿ.ಸಿ. ಎನ್ನುವ ಒಂದು ಪೇಷಂಟ್‌ನ್ನು ಉಳಿಸುವುದಕ್ಕೋಸ್ಕರ ರಕ್ತದಾನ ಯಾರು ಮಾಡೇಬೇಕೆಂದು ಹೇಳಿದಾಗ, ಈ ಶಕ್ತಿ ಜನರಿಂದ ಬರದೇ ಇದ್ದರೆ ಈ ಪೇಷೆಂಟ್ ಉಳಿಯುವುದಿಲ್ಲವೆಂದು ಹೇಳಿದಾಗ, ಇದು ಜಾಸ್ತಿ ಆಯಿತು, ಆ ಪೇಷೆಂಟ್ ಉಳಿಸುವುದಕ್ಕೆ ಎಷ್ಟು ಬೇಕೋ ಅಷ್ಟಾಗಲೀ ಎಂದು ಅವರು ಹೇಳಿರುವುದಕ್ಕೂ ನನ್ನ ವಿರೋಧವಿಲ್ಲ. ನಾನು ಒಂದು ಮಾತನ್ನು ಅತ್ಯಂತ ಆತ್ಮೀಯವಾಗಿ ಹೇಳುತ್ತೇನೆ, ಇದರಲ್ಲಿ ಸೋಲು ಗೆಲುವಿನ ಪ್ರಶ್ನೆ ಇಲ್ಲ. ನಾವು ಆ ತರಹ ತೆಗೆದುಕೊಳ್ಳಲೂಬಾರದು. ಅವರೂ ಸಹ ಅವರ ದೃಷ್ಟಿಯಿಂದ ಸಜೆಸ್ಟ್ ಮಾಡಿದ್ದಲ್ಲ. ನಂಜೇಗೌಡರು ಯಾವಾಗಲೂ ಕಾರ್‌ನಲ್ಲಿ ಓಡಾಡುತ್ತಾರೆ, ಯಾವಾಗಲಾದರೂ ಬಸ್‌ನಲ್ಲಿ ಓಡಾದಿದ್ದೀರಾ ಸ್ವಾಮಿ? ಬಸ್‌ನಲ್ಲಿ ಓಡಾಡುವ ಜನರ ಬಗ್ಗೆ ಮಾತನಾಡಿದವರಲ್ಲಿ ಬಹಳಷ್ಟು ಜನ ಬಸ್‌ನಲ್ಲಿ ಓಡಾಡಿಲ್ಲ. ಇವರೆಲ್ಲಾ ಕಾರ್‌ನಲ್ಲೇ ಓಡಾಡುವವರು. ಆದರೂ ಅವರ ಕಳಕಳಿ ಇದುದ್ದು ಬಸ್‌ನಲ್ಲಿ ಓಡಾಡುವ ಸಾಮಾನ್ಯ ಜನರ ಬಗ್ಗೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನಾದರೂ ಚುಚ್ಚಿ ಮಾತನಾಡದೇ ಇದ್ದರೆ ನಿಮಗೆ ಸಮಾಧಾನವಿರುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಜನ ಸಾಮಾನ್ಯರ ದೃಷ್ಟಿಯಿಂದ ಮತ್ತು ರಾಜ್ಯದ ಹಣಕಾಸಿನ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಗೌರ್ನಮೆಂಟಲ್ ಆರ್ಗನೈಸೇಷನ್ ಆಗಿರುವ ಈ ರಸ್ತೆ ಸಾರಿಗೆ ಸಂಸ್ಥೆಯನ್ನು ಯಾವ ರೀತಿ ಬೆಳೆಸಬೇಕು ಹಾಗೂ ಉಪಯೋಗಿಸಬೇಕೆಂಬ ಬಗ್ಗೆ ಯೋಚನೆ ಮಾಡಬೇಕು. ಮಾನ್ಯ ನಂಜೇಗೌಡರಿಗೆ ಗೊತ್ತಿರುವ ಹಾಗೆ ಎಲ್ಲಾ ಕಡೆಯೂ ಒಂದು ಚರ್ಚೆ ನಡೆಯುತ್ತಿದೆ. Public Sector Undertakings and Public Sector Institutions ಹೇಗೆ ಫಂಕ್ಷನ್ ಮಾಡಬೇಕು? ಏನು ಮಾಡಬೇಕೆಂಬ ಬಗ್ಗೆ ನಾಡಿನ ಎಲ್ಲಾ ಕಡೆ ಮತ್ತು ದೇಶದ ಎಲ್ಲಾ ಕಡೆ ಚಿಂತನೆ ನಡೆಯುತ್ತಿದೆ. ಅದು ಬೇರೆ ವಿಷಯ. ಈಗ ಈ ರಸ್ತೆ ಸಾರಿಗೆ ಸಂಸ್ಥೆಯು ಇರುವ ಸ್ಥಿತಿಯಲ್ಲೇ ಮುಂದುವರಿಸಿಕೊಂಡು ಹೋಗುವುದಕ್ಕೆ ಆಗದೇ ಇರುವುದರಿಂದ, ಇದಕ್ಕೆ ಯಾರಿಂದಲಾದರೂ ರಕ್ತದಾನ ಆಗಲೇ ಬೇಕಾಗುತ್ತದೆಂದು ಮಾತುಕತೆ ನಡೆಸಿದೆವು, personally I am thankful to all the Opposition Leaders particularly Sir Nanjegowda, Thimmappa, Vatal Nagaraj. ಅವರ ಮನಸ್ಸಿನಲ್ಲಿ ಏನು? ಯಥಾಪ್ರಕಾರ 'ಅಸೆಂಬ್ಲಿಯಲ್ಲಿ ಗೊಂದಲ' ಅದು ಹಾಗೆ ಆಯಿತು, ಧರಣಿ ಮಾಡಿದರು, ಸಭಾತ್ಯಾಗ ಮಾಡಿದರು ಎಂದು ಆಗಬಾರದು, ಒಂದು ರೀತಿಯ ಒಳ್ಳೆಯ ಸಂಪ್ರದಾಯವನ್ನು ಸ್ಥಾಪನೆ ಮಾಡುವ ಉದ್ದೇಶದಿಂದ ನಡೆಯಿತು. ಯಾವ ಯಾವ ವಲಯದಲ್ಲಿ ನಾವು ಎಷ್ಟೆಷ್ಟು ಹೆಚ್ಚು ಮಾಡಿದ್ದೇವೆ, ಅದರಲ್ಲಿ ಎಷ್ಟನ್ನು ಇಳಿಸಬಹುದು ಎಂಬ ಬಗ್ಗೆ 2-3 ಸಲ ಚರ್ಚೆ ಮಾಡಿ ಸರ್ವ ಸಮ್ಮತದಿಂದ ಒಪ್ಪಿಕೊಳ್ಳಲಾಗಿದೆ. ಇದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. "ಕಳೆದ ಎರಡು ದಿನಗಳಿಂದ ಉಭಯ ಸದನಗಳಲ್ಲಿ, ಇತ್ತೀಚೆಗೆ ಹೆಚ್ಚಿಸಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ದರಗಳ ಬಗ್ಗೆ ಸಾಕಷ್ಟು ವಿವರಣೆಯನ್ನು ಕೊಟ್ಟು ಶೇಕಡ 35ರಷ್ಟು ದರ ಏರಿಕೆಯೆಂದು ಸಮರ್ಥಿಸಿಕೊಂಡಿದ್ದೆವು. ಆದರೂ ಸಹ ಸಂಸ್ಥೆಯು ನೀಡುತ್ತಿರುವ ವಿವಿಧವಾದ ಸೇವೆಗಳಲ್ಲಿ ಸಾಮಾನ್ಯ ವೇಗದೂತ, ಪುಷ್ಪಕ್, ಆರೆ ಸುಖಾಸೀನ ಮತ್ತು ಸುಖಾಸೀನ ಇತ್ಯಾದಿ, ನಿಗದಿಪಡಿಸಿರುವ ಪರಿಷ್ಕೃತ ದರಗಳಲ್ಲಿ, ಹಿಂದಿನ ದರಗಳಿಗೆ ಹೋಲಿಸಿದಾಗ, ಕೆಲವು ಕಡೆ ಪ್ರತಿಶತ 50, ಕೆಲವು ಕಡೆ 100ಕ್ಕಿಂತ ಹೆಚ್ಚು ಕಂಡು ಬರುತ್ತದೆ ಮತ್ತು ಜನ ಸಾಮಾನ್ಯರು ಪ್ರತಿ ನಿತ್ಯದ ಕೆಲಸಗಳಿಗೆ ಹೋಗಲು ಕರ್ನಾಟಕ ರಾಜ್ಯದ ಸಾರಿಗೆ ಸಂಸ್ಥೆಯನ್ನೇ ಅವಲಂಬಿಸಿರುವಾಗ ಅವರಿಗೆ ನೀಡುತ್ತಿರುವ ಸೇವೆಗಳಲ್ಲಿ ಹೆಚ್ಚು ರಿಯಾಯಿತಿ ಮತ್ತು ಇನ್ನಿತರ ಸೇವೆಗಳಲ್ಲೂ ಸಹ ರಿಯಾಯಿತಿಗಳನ್ನು ತೋರಿಸಲು ಸರ್ಕಾರ ಇಚ್ಛಿಸಿದೆ. ಅದರ ಪ್ರಕಾರ ಈ ಕೆಳಕಂಡಂತೆ ಬದಲಾವಣೆ ಮಾಡಲಾಗಿದೆ. ಗ್ರಾಮಾಂತರ ಪ್ರದೇಶಗಳ ಕಡೆ ಓಡುವ ಕೆ.ಎಸ್.ಆರ್.ಟಿ.ಸಿ. ಬಸ್‌ಗಳಲ್ಲಿ ಪ್ರತಿ ಕಿಲೋಮೀಟರ್‌ಗೆ 16 ಪೈಸೆಯಿಂದ 22 ಪೈಸೆಗೆ ಏರಿಸಿದ್ದೆವು. ಅದರಲ್ಲಿ ಎರಡೂವರೆ ಪೈಸೆ ಕಡಿಮೆ ಮಾಡಿ ಹತ್ತೊಂಭತ್ತುವರೆ ಪೈಸೆಗೆ ಒಪ್ಪಿಕೊಂಡಿದ್ದೇವೆ. 'ವೇಗ-ಧೂತ' ಇದರಲ್ಲಿ ಪ್ರತಿ ಕಿಲೋಮೀಟರಗೆ 18 ಪೈಸೆಯಿಂದ 26 ಪೈಸೆಗೆ ಏರಿಸಿದ್ದರಲ್ಲಿ 2.25 ಪೈಸೆ ಕಡಿಮೆ ಮಾಡಿ 23.75 ಪೈಸೆಗೆ ಒಪ್ಪಿಕೊಂಡಿದ್ದೇವೆ. ಉಳಿದವಕ್ಕೆ ಅಷ್ಟು ಕಾಂಟ್ರವರ್ಸಿ ಬರಲಿಲ್ಲ, ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಆರೆ ಸುಖಾಸೀನಕ್ಕೆ ಎರಡು ಪೈಸೆ ಕಡಿಮೆ ಮಾಡಿದ್ದೇವೆ, ಸುಖಾಸೀನಕ್ಕೆ

2 ಪೈಸೆ ಕಡಿಮೆ ಮಾಡಿದ್ದೇವೆ. ಆಮೇಲೆ, ಸಿಟಿ ಸರ್ವೀಸ್‌ನಲ್ಲಿ ಓಡುತ್ತಿರುವ ಪುಷ್ಪಕ್ ಬಸ್‌ನಲ್ಲಿ ಸ್ಟೇಜ್‌ಗಳನ್ನು ಮಾಡಿರುವುದರಿಂದ, ಮೊದಲ 4 ಕಿಲೋಮೀಟರ್‌ವರೆಗೆ ಬಂದರೆ 2 ರೂಪಾಯಿ ಕೊಡುವವನು 5 ಕಿಲೋಮೀಟರ್‌ಗೆ ಬಂದ ತಕ್ಷಣ 5 ರೂಪಾಯಿ ಕೊಡಬೇಕಾಗುತ್ತದೆ. ಆ ರೀತಿ ಏರಿಸುವುದು ಸರಿಯಲ್ಲವೆಂದು ಹೇಳಿರುವುದನ್ನು ನಮ್ಮ ಅಧಿಕಾರಿಗಳೂ ಒಪ್ಪಿಕೊಂಡಿದ್ದಾರೆ, ಅದನ್ನು ಸರಳೀಕರಣ ಮಾಡುವುದರಿಂದ ರ್ಯಾಷನಲೈಸೇಷನ್ ಮಾಡುವುದರಿಂದ ನಗರದ ಬಸ ಪ್ರಯಾಣಿಕರಿಗೂ ರಿಲೀಫ್ ಸಿಗುತ್ತದೆ. ಬೆಂಗಳೂರು ಸಬರ್ಬನ್ ಏರಿಯಾಗಳಲ್ಲಿ ಓಡುವ ಬಸ್ ದರಗಳಲ್ಲೂ ಈ ರೀತಿಯ ವ್ಯತ್ಯಾಸಗಳಿವೆ, ಅದನ್ನೆಲ್ಲಾ ಸೈಂಟಿಫಿಕ್ ಆಧಾರದ ಮೇಲೆ ಸರಿಪಡಿಸಬೇಕೆಂದು ಅಧಿಕಾರಿಗಳಿಗೆ ಹೇಳಿದ್ದೇವೆ. ಈ ರೀತಿ ಕಡಿಮೆ ಮಾಡಿರುವುದರಿಂದ 50 ರಿಂದ 55 ಕೋಟಿ ರೂಪಾಯಿಗಳವರೆಗೆ ಸರ್ಕಾರಕ್ಕೆ ಕೊರತೆ ಬೀಳುತ್ತದೆ. ಕೆ.ಎಸ್.ಆರ್.ಟಿ.ಸಿ. ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೇ 180 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆಮೇಲೆ ಇದರಲ್ಲಿ ವರ್ಕರ್ಸ್‌ಗೆ ಕೊಡಬೇಕಾಗಿರುವ ಪೇ ರಿವಿಷನ್ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ, just to keep it alive not to make any profit, ಆದರೂ ಮಾನ್ಯ ವಿರೋಧ ಪಕ್ಷದ ನಾಯಕರುಗಳು, ಒಂದೇ ಸಾರಿ ಏಕೆ? ಕಳೆದ ನಾಲ್ಕು ವರ್ಷಗಳಿಂದ ನಾವು ಹೆಚ್ಚು ಮಾಡಿಲ್ಲ. ಅದೂ ಒಂದು ರೀತಿಯ ತಪ್ಪೇ. ಸಾಮಾನ್ಯವಾಗಿ ಪ್ರಗತಿ ಪರ ದೇಶದಲ್ಲಿ ಪ್ರತಿವರ್ಷ ಟ್ಯಾಕ್ಸ್ ಬರ್ಡನ್ ಎಷ್ಟು ಬರುತ್ತದೆಂದು ಅವರಿಗೆ ಗೊತ್ತಿರುತ್ತದೆ. Every year they know how much more they have to pay and they will be ready to pay that. ನಾವು ಹಾಗೆ ಮಾಡುವುದನ್ನು ಬಿಟ್ಟುಬಿಡುತ್ತೇವೆ. ನಾಲ್ಕು ವರ್ಷ ಬಿಟ್ಟುಬಿಡುತ್ತೇವೆ. ಈ ಚುನಾವಣೆ ಬಂತು ಈಗ ಹಾಕುವುದು ಬೇಡ, ಆ ಚುನಾವಣೆ ಬಂತು ಈಗ ಹಾಕುವುದು ಬೇಡ ಎಂದು ಚುನಾವಣೆಯಲ್ಲಿ ಜನರ ಮನವನ್ನು ಒಲಿಸುವುದಕ್ಕಾಗಿ ನಾಲ್ಕು ವರ್ಷಗಳಾದರೂ ದರಗಳನ್ನು ಹೆಚ್ಚು ಮಾಡದೆ ನಾಲ್ಕೂ ವರ್ಷಗಳ ದರಗಳನ್ನು ಒಂದೇ ಸಾರಿ ಹಾಕಿ ಜನರುಗಳಿಗೆ ಕೊಡಬಾರದ ಬಾಧೆಯನ್ನು ಕೊಡುವುದಕ್ಕೆ ಹೋಗುತ್ತೇವೆ. ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಜನರನ್ನು ಪ್ರೀತಿಗೊಳಿಸುವುದಕ್ಕೋಸ್ಕರ ಈ ಕೆಲಸಗಳನ್ನು ಮಾಡಿ ಕೆಲವು ಸಂಸ್ಥೆಗಳು ಸಾಯುವ ಹಾಗೆ ಮಾಡಿದ್ದೇವೆ. ಸದ್ಯ ಈಗ ತಾವು ಒಪ್ಪಿದ್ದೀರಿ. We have to work together, ಕೆಲವು ವಿಷಯಗಳಲ್ಲಿ ನಮ್ಮ ನಿಮ್ಮ ಮಧ್ಯೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೆ ಅದಕ್ಕೆ ರಾಜೀ ಆಗುವುದು ಬೇಡ. ನಿಮ್ಮ ಇಂಟರೆಸ್ಟ್ ಅದೇ ಇದ್ದಾಗ ನಮ್ಮ ಇಂಟರೆಸ್ಟ್ ಅದೇ ಇದ್ದಾಗ ಕಾರ್ಯಕ್ರಮಗಳ ಬಗ್ಗೆ, ಜನರ ಹಿತ ರಕ್ಷಣೆ ಮಾಡುವ ಬಗ್ಗೆ ಒಂದು ಮನಸ್ಸಿನಲ್ಲಿ ಕೆಲಸ ಮಾಡೋಣ. ಇವತ್ತು ಬೆಳಿಗ್ಗೆ ನಾನು ಒಂದು ಪೇಪರನಲ್ಲಿ ನೋಡಿದೆ 'ಸರ್ಕಾರ ಮಣೆಯಿತು' ಎಂದು ಇದೆ. ಹೌದು ಮಣೆಯಿತು. ಜನರ ಹಿತಕ್ಕೋಸ್ಕರ ಸರ್ಕಾರ ಮಣೆಯಲೇಬಾರದೇ? ಸರ್ಕಾರ ಅಂದರೆ ಅದು ಮಣೆಯುವುದೇ ಇಲ್ಲವೆಂದು ಕೆಲವರು ತಿಳಿದುಕೊಂಡು ಬಿಟ್ಟಿದ್ದಾರೆ. ಅದು ಹಾಗಲ್ಲ. ಸರ್ಕಾರ ಮುಣೆಯುವುದು ಜನರ ಹಿತಕ್ಕೆ.

ಶ್ರೀ ಹೆಚ್.ಎನ್. ನಂಜೇಗೌಡ : ಅದನ್ನೂ ಬರೆದಿದ್ದಾರೆ. ಇನ್ನೊಂದು ಪತ್ರಿಕೆಯಲ್ಲಿ ಬಾಕ್ಸ್ ಐಟಮ್ ಮಾಡಿ 'ಊಟ ಮಾಡಿ ಎದ್ದು ಹೋದರೆಂದು' ಬರೆದಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಪಾಪ ಅವರಿಗೆ ಹೊಟ್ಟೆ ಕಿಚ್ಚು ಆಗಿರಬೇಕು. ಅವರನ್ನೂ ಕರೆದುಕೊಂಡು ಊಟ ಮಾಡಿದ್ದಿದ್ದರೆ ಆ ರೀತಿ ಬರೆಯುತ್ತಿರಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇನ್ನೊಂದು ಪತ್ರಿಕೆಯಲ್ಲಿ ಎಕ್ಸೈಸ್ ಕಂಟ್ರಾಕ್ಟರು ಊಟ ಕೊಡಿಸಿದ್ದಾರೆಂದು ಬರೆದಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಅಷ್ಟು ಕ್ಲೋಸ್ ಆಗಿ ನೀವು ಎಲ್ಲಿ ಇರುತ್ತೀರಿ? ಅವರಿಗೆ ಗೊತ್ತಿರುತ್ತದೆ, ಯಾವ ಹೋಟೆಲ್‌ನಲ್ಲಿ ಯಾರು ಕೊಡಿಸಿದರೆಂದು ಅವರಿಗೆ ತಿಳಿಯುತ್ತದೆ.

5.30 PM

ಸರಕಾರದ ವತಿಯಿಂದ ಹೇಳುವುದೇನೆಂದರೆ, ನಾವು ಮಣೆದಿದ್ದೇವೆ ಎಂದು ಅಲ್ಲ, ಕರ್ನಾಟಕದ ಜನರ ಹಿತದೃಷ್ಟಿಯಿಂದ ನಾವಿಂದು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಮುಂದೆಯೂ ಇದೇ ರೀತಿಯ ಒಂದು ಸತ್ಸಂಪ್ರದಾಯವನ್ನು ಬೆಳೆಸಿಕೊಂಡು ಹೋಗಬೇಕೆಂದು ಕೇಳಿ, ಈ ಆರ್ಡರ ಏನಿದೆ, ``It will go into implementation day after tomorrow morning i.e., on 23rd Sunday morning. ಏಕೆಂದರೆ ಟಿಕೇಟ್‌ಗಳನ್ನು, ಸ್ಟೇಜ್‌ಗಳನ್ನು, ಸ್ಟೇಜ್‌ಗಳನ್ನು ಮುಂತಾಗಿ ಕೆಲವು ಬದಲಾವಣೆಯನ್ನು ಮಾಡಬೇಕಾಗುತ್ತದೆಯಾದುದರಿಂದ ಸ್ವಲ್ಪ ಸಮಯ ಬೇಕಾಗುತ್ತದೆ. ಆದ್ದರಿಂದ 23-3-97 ರಿಂದ ಈ ಆಜ್ಞೆಯನ್ನು ಜಾರಿಗೆ ತರುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ತಮ್ಮ ನಿರ್ಣಯವನ್ನು ಘೋಷಿಸಿದ್ದಾರೆ. ನಮ್ಮ ಎಲ್ಲಾ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ನಾವು ಒಂದು ತೀರ್ಮಾನಕ್ಕೆ ಬರಬೇಕು, ಜನಸಾಮಾನ್ಯರಿಗೆ ಆಗತಕ್ಕಂಥ ತೊಂದರೆಯನ್ನು ಕಡಿಮೆ ಮಾಡಬೇಕೆನ್ನುವ ದೃಷ್ಟಿಯಿಂದಲೇ ನಾವುಗಳು ಹಠ ಹಿಡಿದಿದ್ದೆವು. ನಾವು ಪ್ರತಿಷ್ಠೆ ಮಾಡಿಕೊಳ್ಳಬೇಕು, ಸರಕಾರವನ್ನು ಮಣಿಸಬೇಕು ಅಥವಾ ಸರಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆಂಬ ಯಾವುದೇ ಧೋರಣೆಯು ನಮ್ಮಲ್ಲಿ ಇರಲಿಲ್ಲ. ನಮ್ಮ ಧೋರಣೆ ಏನೆಂದರೆ, ಜನಸಾಮಾನ್ಯರಿಗೆ ಬಸ್ ಪ್ರಯಾಣ ದರವನು 233 ಪರ್‌ಸೆಂಟ್‌ನಿಂದ 150 ಪರ್‌ಸೆಂಟ್‌ವರೆಗೆ ಹೆಚ್ಚಿಸಿರತಕ್ಕಂಥಾದ್ದು ಆಗಿತ್ತು. ಅದರ ಬಗ್ಗೆ ಮಾತ್ರ ಪ್ರತಿಭಟಿಸಿದ್ದೇವೆಯೇ ಹೊರತಾಗಿ ಸರಕಾರಕ್ಕೆ ಕೆಟ್ಟ ಹೆಸರು ತರಬೇಕು, ಇಕ್ಕಟ್ಟಿಗೆ ಸಿಕ್ಕಿಸಬೇಕು ಅಥವಾ ನಾವು ಹೇಳಿದ್ದೇ ಆಗಬೇಕೆಂಬುದು ನಮ್ಮಲ್ಲಿ ಇಲ್ಲ. ಈಗ ನಾವು ಹೇಳಿದ್ದು ಎಲ್ಲವೂ ಆಗಿಲ್ಲವೆಂಬುದು ಕೂಡ ತಮಗೆ ಗೊತ್ತೇ ಇದೆ. ನಾವು ಕೊನೆ ಪಕ್ಷ 50 ಪರ್‌ಸೆಂಟ್‌ಗಾದರೂ ಎಲ್ಲವನ್ನೂ ಇಳಿಸಿ ಎಂದು ಹೇಳಿದ್ದೆವು. ತಾವು ಕೇಳಲಿಲ್ಲ ಆದರೂ ಕೂಡ ಸಾಮಾನ್ಯ ಗ್ರಾಮಾಂತರ ಜನರಿಗೆ ಇವೊತ್ತು 45 ಪರ್‌ಸೆಂಟ್‌ನಷ್ಟು ಇಳಿದ ಹಾಗೆ ಆಗಿದೆ. ಅಂದರೆ ತಾವು ಏರಿಸಿದ್ದು 16ರಿಂದ 22 ಪೈಸೆ ಏನಿತ್ತು ಅದರಲ್ಲಿ ಇವೊತ್ತು 19.50 ಪೈಸೆ ಆಗಿದೆ. ಎರಡನೆಯದು ಇದರಲ್ಲಿ ಇನ್ನೂ ತಾವು ಕನ್ಸಿಡರ್ ಮಾಡಬಹುದು ಈಗ ತಾವು ಘೋಷಣೆ ಮಾಡಿದ್ದೀರಿ. ಅದಕ್ಕೆ ನಾವು ಪುನಃ ಧರಣಿ ಮಾಡತಕ್ಕಂಥಾದ್ದು ಮುಂತಾಗಿ ಏನೂ ಇಲ್ಲ. ಏಕೆಂದರೆ ಒಂದು ಜೆಂಟಲ್‌ಮ್ಯಾನ್ಸ್ ಅಗ್ರಿಮೆಂಟ್ ಅಂದಮೇಲೆ ನಾವು ಅದನ್ನು

ಗೌರವಿಸಬೇಕಾಗುತ್ತದೆ. ಆದರೂ ತಮಗೆ ನಾವೇಕೆ ಹೇಳುತ್ತಿದ್ದೇವೆ ಅಂದರೆ, ನಮ್ಮ ಎಕ್ಸ್‌ಪ್ರೆಸ್ ಬಸ್‌ಗಳು ತಾಲ್ಲೂಕಿನಿಂದ ತಾಲ್ಲೂಕಿಗೆ, ತಾಲ್ಲೂಕಿನಿಂದ ಡಿಸ್ಟ್ರಿಕ್ಟ್‌ಗೆ ಹೋಗುತ್ತಿರುವುದರಿಂದ ಹೆಚ್ಚಾಗಿ ಇದನ್ನು ಗ್ರಾಮಾಂತರ ಜನರು ಇದನ್ನು ಉಪಯೋಗ ಮಾಡುತ್ತಾ ಇರುತ್ತಾರೆ. ಆ ಬಸ್‌ಗಳು ಸಾಮಾನ್ಯವಾಗಿ ಎಷ್ಟು ಕಿ.ಮೀ. ಓಡಾಡುತ್ತಿವೆ ಅಂದರೆ ವರ್ಷಕ್ಕೆ 43 ಕೋಟಿ ಕಿ.ಮೀ. ಗಳಷ್ಟು ಓಡುತ್ತಿವೆ. ಮತ್ತು ಸಾಮಾನ್ಯವಾಗಿ ಅಡ್ಡಾಡತಕ್ಕಂಥದ್ದು 35 ಕೋಟಿ ಕಿ.ಮೀ. ಆದ್ದರಿಂದ ಈ ಎರಡೇ ಮಹತ್ವವುಳ್ಳದ್ದು. ಬಾಕಿ ಇರುವುಗಳೆಲ್ಲ 4,5,3 ಕೋಟಿ ಹೀಗೆ ಸಿಟಿ ಪ್ರದೇಶಗಳಲ್ಲಿ ಅಡ್ಡಾಡುತ್ತಿರತಕ್ಕಂಥವುಗಳು. ಬಹುತೇಕವಾಗಿ ಗ್ರಾಮಾಂತರ ಜನರಿಗೆ ಅನುಕೂಲವಾಗತಕ್ಕಂಥದ್ದು ಐಟಂ ನಂಬರ್-1 ಅಂದರೆ ಸಾಮಾನ್ಯ ಗ್ರಾಮಾಂತರ, ಎರಡನೆಯದು ವೇಗದೂತ, ಐದನೆಯದು ನಗರದ ಕೆಂಪುಬಸಗಳು, ಏಳನೆಯದು ನಗರದ ಹೊರವಲಯದಲ್ಲಿರತಕ್ಕಂಥವುಗಳು. ಇದಕ್ಕಾಗಿಯೇ ನಮ್ಮ ಹೆಚ್ಚಿನ ಒತ್ತಾಯ ಇತ್ತು. ಪುಷ್ಪಕ್‌ಗೆ ತಾವು 150ರಷ್ಟು ಹೆಚ್ಚು ಮಾಡಿದ್ದನ್ನು ರ್‍ಯಾಶನಲೈಸ್ ಮಾಡುತ್ತೇವೆಂದು ಹೇಳಿದ್ದೀರಿ. ಸೆಮಿಲಕ್ಸುರಿ, ಲಕ್ಸುರಿಗಳ ದರಗಳನ್ನು ಕೂಡ ರ್‍ಯಾಶನಲೈಸ್ ಮಾಡುತ್ತೇವೆ, ಒಂದು ಸೈಂಟಿಫಿಕ್ ಆಗಿ ಮಾಡುತ್ತೇವೆ, ಹೆಚ್ಚಳ ಆಗದಂತೆ ಸರಿಪಡಿಸುತ್ತೇವೆ, ಅದನ್ನು ಯಾವ ರೀತಿಯಾಗಿ ಸರಿಪಡಿಸಬೇಕೋ ಆ ರೀತಿಯಾಗಿ ಸರಪಡಿಸಿ ನಾಡಿದ್ದೇ ಈ ಬಗ್ಗೆ ಆದೇಶವನ್ನು ಇಷ್ಯೂ ಮಾಡುತ್ತೇವೆಂದು ಹೇಳಿದ್ದೀರಿ. ಒಂದು ಸಾರಿ ನಾವು ಒಂದು ನಿರ್ಣಯಕ್ಕೆ ಬಂದ ಮೇಲೆ ಇನ್‌ವಿಟೆ ಬಲೀ ನಾವು ಒಪ್ಪಿಕೊಳ್ಳಬೇಕಾಯಿತು. ಇವತ್ತು ಎಲ್ಲರೂ ಕೂಡಿ ಅದನ್ನು ಒಪ್ಪಿಕೊಂಡಿದ್ದೇವೆ. ಆದರೂ ಕೂಡ ಇನ್ನೂ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಈ ಐಟಂ ನಂಬರ್-2 ಏನಿದೆ, ಎಕ್ಸ್‌ಪ್ರೆಸ್ ಬಸ್ ಇದರ ಬಗ್ಗೆ ತಾವು ಚಿಂತನೆ ಮಾಡಬೇಕು. ಏಕೆಂದರೆ ಅದರಲ್ಲಿ ಕೇವಲ 2.25 ಪೈಸೆ ಮಾಡಿದ್ದೀರಿ. ಅದು ಕೇವಲ 31.5 ಪರ್‌ಸೆಂಟ್ ಬರುತ್ತದೆ. ಅದನ್ನು ಇನ್ನೂ ಸಮೀಪವಾಗಿ .5 ಆದರೂ ಮಾಡಿದರೆ ಸುಮಾರು 40 ಪರ್‌ಸೆಂಟ್‌ನಷ್ಟು ಬರುವಾಗೆ ಮಾಡಿದರೆ ನೀವು ಹಳ್ಳಿಯ ಜನರಿಗೆ ದೊಡ್ಡ ಸಹಾಯವನ್ನು ಮಾಡಿದ ಹಾಗೆ ಆಗುತ್ತದೆ. ಮಾನ್ಯ ಸಿಂಧ್ಯಾರವರು ಇದರಲ್ಲಿ ನಮಗೆ 50-60 ಕೋಟಿ ರೂಪಾಯಿಗಳು ಸೋರಿ ಹೋದುವು ಎಂದು ಹೇಳುತ್ತಿರುತ್ತಾರೆ. ಆದರೆ ನಾವು ಸಾಮಾನ್ಯ ಜನರ ಹಿತದೃಷ್ಟಿಯಿಂದ ನೋಡುವಾಗ ಮತ್ತು ಆ ದೃಷ್ಟಿಯಿಂದಲೇ ನಾವೆಲ್ಲರೂ ಕುಳಿತು ಯೋಚನೆ ಮಾಡಿ ಇದನ್ನು ನಿರ್ಣಯ ಮಾಡಿದ್ದೇವೆ. ಆದರೆ ಎರಡನೇ ಐಟಂ ಸುಮಾರು 43 ಕಿ.ಮೀ.ಗಳಷ್ಟು ಅಡ್ಡಾಡತಕ್ಕಂಥವರು ಹಳ್ಳಿಗಳಲ್ಲಿರತಕ್ಕಂಥ ಜನರು. ಆ ಜನರು ದುರ್ಬಲರು. ಆದ್ದರಿಂದ ತಾವು 23ನೇ ತಾರೀಖಿಗೆ ಏನು ಆರ್ಡರ್‌ನ್ನು ಹೊರಡಿಸುತ್ತಾ ಇದ್ದೀರಿ. ಇನ್ನೂ ಸಮಯವಿದೆ, ಇದನ್ನು ಪುನರ್‌ಪರಿಶೀಲನೆ ಮಾಡಿ ಈ ಒಂದು ಐಟಂ ಬಗ್ಗೆ ಇನ್ನೂ ಸ್ವಲ್ಪ ಕಡಿಮೆ ಮಾಡಿದರೆ ಖಂಡಿತವಾಗಿ ನೀವು ದೊಡ್ಡ ಒಂದು ರಿಲೀಫ್‌ನ್ನು ಹಳ್ಳಿಯ ಜನರಿಗೆ ಕೊಟ್ಟ ಹಾಗೆ ಆಗುತ್ತದೆ. ಉಳಿದಂತೆ ಹೆಚ್ಚುಕಡಿಮೆ ಇವತ್ತು ಎಲ್ಲರೂ ಕುಳಿತು ಒಂದು ಸೆಟಲ್‌ಮೆಂಟ್ ಎಲ್ಲರ ಸಮಕ್ಷಮದಲ್ಲಿ ಆದುದಕ್ಕಾಗಿ ಮತ್ತು ಎಲ್ಲರೂ ಮುಖಂಡರುಗಳು ಇದರಲ್ಲಿ ಆಸಕ್ತಿವಹಿಸಿ ನಿಜವಾಗಲೂ ಸೌಹಾರ್ದಯುತವಾಗಿ ಬಗೆಹರಿಸಬೇಕು ಮತ್ತು ಸದನದ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕು ಎನ್ನುವ ದೃಷ್ಟಿಯಿಂದ ಒಪ್ಪಂದ ಏನಾಗಿದೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಏಕೆಂದರೆ ನಾವು ಕೇಳಿದಷ್ಟು ಯಾವ ಸರಕಾರವೂ ಕೊಡುವುದಿಲ್ಲ. ಮಾನ್ಯ ನಂಜೇಗೌಡರು ಹೇಳಿದ ಹಾಗೆ 25.ಕಿ.ಮೀ ನಷ್ಟು ಆಕ್ರಮಣ ಮಾಡುವುದು. ಆ ಮೇಲೆ 15 .ಕಿ.ಮೀ

ನಿಂತರೆ, ಅಲ್ಲಿಗೆ ಅದು ಸೀಸೆಫೈಯರ್ ಸ್ಪೆಟಸ್ಕೋ ಮೈಂಟೈನ್ ಮಾಡಿ ಎಂದು ಹೇಳುವುದು. ಏಕೆಂದರೆ ಕೊನೆಗೆ ಅವರಿಗೆ 15.ಕಿ.ಮೀ ಆದರೂ ಸಿಕ್ಕಿತಲ್ಲ, ಆದರೆ ನಮ್ಮ ಕಥೆ ಹೇಗೆ ಆಗಿದೆ ಅಂದರೆ, ಯಾವುದೋ ಊರಿನಲ್ಲಿ ಕುತ್ತಿಗೆ ಕೊಯ್ದು ಬಿಡುತ್ತಿದ್ದರಂತೆ. ಅಂಥ ಊರಿನಲ್ಲಿ ನಮಗೆ ನಾಲ್ಕು ಹೊಡೆದು ಬಿಟ್ಟರೆ ಸಾಕಾಗಿದೆ ಎನ್ನುವಂತಾಗಿದೆ ನಮ್ಮ ಪಾಡು.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಖರ್ಗೆಯವರು ಕೋಟಿ. ಕಿ.ಮೀ.ಗಳ ಬಗ್ಗೆ ಹೇಳಿದ್ದಾರಲ್ಲ! ಅದರಲ್ಲಿ ಎಷ್ಟು ಬಸ್‌ಗಳು ಓಡುತ್ತವೆ, ಕ್ಯಾನ್ಸಲೇಷನ್ ಎಷ್ಟು, ಬಸ್‌ಗಳು ಖಾಲಿ ಓಡುತ್ತಿವೆ, ಎಂಬಿತ್ಯಾದಿ ವಿಚಾರಗಳು ಬರುತ್ತವೆ. ಅದಕ್ಕೆ ಒಂದು ಉದಾಹರಣೆ ಕೊಡುವುದಾದರೆ, ಯಾರೋ ಒಬ್ಬ ಡಾಕ್ಟರ ಒಬ್ಬ ರೋಗಿಗೆ ದಿವಸವೂ ನಾಲ್ಕು ಕಿ.ಮೀ. ವಾಕ್ ಮಾಡು ಸರಿಹೋಗುತ್ತದೆ ಎಂದರಂತೆ. ಆತನು ಎಂಟು ದಿನಗಳ ನಂತರ ಡಾಕ್ಟರ್‌ಗೆ ಫೋನ್ ಮಾಡಿದನಂತೆ. ನಾನು ನೀವು ಹೇಳಿದ ಹಾಗೆ ದಿನವೂ ನಾಲ್ಕು ಕಿ.ಮೀ. ನಡೆದುಕೊಂಡು ಹೋಗಿ ಈಗ ತುಮಕೂರಿನಲ್ಲಿದ್ದೇನೆ, ಏನು ಮಾಡಲಿ? ಎಂದು ಕೇಳಿದನಂತೆ. ಆಗ ಡಾಕ್ಟರ್ ರೋಗಿಗೆ "ಏನಪ್ಪಾ ನಾನು ನಿನಗೆ ನಡೆದುಕೊಂಡು ತುಮಕೂರಿಗೆ ಹೋಗು ಎಂದು ಹೇಳಲಿಲ್ಲ, ಮನೆಯಲ್ಲಿದ್ದುಕೊಂಡೇ ದಿನವೂ ನಾಲ್ಕು ಕಿ.ಮೀ. ವಾಕಿಂಗ್‌ಮಾಡು" ಎಂದು ಹೇಳಿದ್ದೆ ಅಂದರಂತೆ. ಈ ವಿಚಾರ ಕೂಡ ಹಾಗೆ ಆಯಿತು. 45 ಕೋಟಿ. ಕಿ.ಮೀ. ಅಂದರೆ ಆ ಬಸ್‌ಗಳು ಅಲ್ಲಿಯೇ ಓಡಾಡಿರುತ್ತವೆ ಅಂದರೆ ನಾನು ಅದು ಹೇಗೆ ಆಗುತ್ತದೆ ಎಂಬ ಬಗ್ಗೆ ಸ್ವಲ್ಪ ಎಕ್ಸ್‌ಪ್ಲೈನ್ ಮಾಡಿದೆ. ಕೋಟಿ ಕಿ.ಮೀ.ಗಳ ಮೇಲೆ ಲೆಕ್ಕ ಹಾಕಿದರೆ ಅದು ಸರಿಯಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ತಪ್ಪು ಭಾವಿಸಿದ್ದೀರಿ. ನಾನು ಹೇಳಿದ್ದೇನೆಂದರೆ, 43 ಕಿ.ಮೀ. ಓಡಾಡುತ್ತವೆ ಅಂದರೆ ಅವುಗಳು ಅಲ್ಲಿಯೇ ಓಡಾಡಬೇಕೆಂದೇನೂ ಇಲ್ಲ, ಅಲ್ಲಿಯೇ ಓಡಾಡಿದರೂ ಕೂಡ, ಹಳ್ಳಿಗಳಲ್ಲಿ ಓಡಾಡತಕ್ಕಂಥ ಬಸ್‌ಗಳಿಂದ ಹಳ್ಳಿಯ ಜನರಿಗೆ ಅನುಕೂಲವಾಗುತ್ತದೆ ಎಂದು ಹೇಳಿದೆ.8-10 ಸಾವಿರ ಕಿ.ಮೀ. ಇರತಕ್ಕಂಥಾದ್ದು ಪುಷ್ಪಕ್ ಮುಂತಾದವುಗಳು. ಅಂದರೆ ಹೆಚ್ಚು ಕಿ.ಮೀ. ಓಡಾತಕ್ಕಂಥವುಗಳು ಎಕ್ಸ್‌ಪ್ರೆಸ್ ಬಸ್‌ಗಳು. ಅವುಗಳು ಹಳ್ಳಿಗಳಲ್ಲಿ ಓಡಾಡುತ್ತವೆ. ಅದಕ್ಕೆ ನೀವು ರೇಟ್‌ನ್ನು ಕಡಿಮೆ ಮಾಡಿ. ನಾನು ಹೇಳುವುದಿಷ್ಟೆ, ಏನೇ ಆಗಲಿ ಈಗ ಜನಸಾಮಾನ್ಯರಿಗೆ ಒಂದು ರೀತಿಯಲ್ಲಿ ಸ್ವಲ್ಪಮಟ್ಟಿಗೆ ರಿಲೀಫ್ ಸಿಕ್ಕಿದೆ. ಎಲ್ಲರೂ ಸೇರಿ ಶ್ರಮಪಟ್ಟು ಒಂದು ತೀರ್ಮಾನಕ್ಕೆ ಬರುವಂತಾಗಿದೆ. ಅದಕ್ಕಾಗಿ ಮಾನ್ಯ ಹಿರಿಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು, ಶ್ರೀನಂಜೇಗೌಡರು, ನಂಜಪ್ಪನವರು, ಜಯಚಂದ್ರರವರು, ವಾಟಾಳ್ ನಾಗರಾಜ್‌ರವರು ಮುಂತಾಗಿ ಶ್ರಮವಹಿಸಿ ಒಂದು ತೀರ್ಮಾನಕ್ಕೆ ಬರುವಲ್ಲಿ ಸಹಕಾರಿಯಾದರು. ಅವರುಗಳು ಮಾತಿಗೆ ಮಾನ್ಯ ಮುಖ್ಯಮಂತ್ರಿಯವರು ಸ್ವಲ್ಪ ಹೆಚ್ಚಿನ ಬೆಲೆಯನ್ನು ಕೊಟ್ಟರು. ನಾವು ಹೋಗಿದ್ದಾಗ ಸ್ವಲ್ಪ ಗಲಾಟೆಯಿಂದಾಗಿ ನಮಗೆ ಅಷ್ಟು ರೆಸ್ಪಾನ್ಸ್ ಸಿಗಲಿಲ್ಲ. ನಾವು ಎರಡು ಸಾರಿ ಹೋದಾಗಲೂ ಮುಖ್ಯಮಂತ್ರಿಯವರು ಅಷ್ಟೊಂದು ಸ್ಪಂಧಿಸಲಿಲಲ್ಲ. ಸ್ವಲ್ಪಮಟ್ಟಿಗೆ ನಾವು ಹೇಳಿದ್ದಕ್ಕೆ ಬಂದರೂ ಕೂಡ ತಮ್ಮ ಮಾತಿನಿಂದ ಎದ್ದು ಹೋಗಿ ಬಿಟ್ಟರು. ಏನೇ ಇದ್ದರೂ ಕೂಡ ಇವೊತ್ತು ಸ್ವಲ್ಪಮಟ್ಟಿನ ಪರಿಹಾರವನ್ನಾದರೂ ನಾವು ಕಂಡಿದ್ದೇವೆ.

ಅದಕ್ಕಾಗಿ ತಮಗೂ ಕೂಡ ನಾನು ಅಭಿನಂದಿಸುತ್ತೇನೆ. ಹಾಗೆಯೇ ಮುಖ್ಯಮಂತ್ರಿಯವರು ಕೂಡ ಈ ತೀರ್ಮಾನವನ್ನು ತೆಗೆದುಕೊಂಡಿರುವುದಕ್ಕಾಗಿ ಅವರಿಗೂ ಕೂಡ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

+ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಯವರು ಇವತ್ತ ಘೋಷಣೆ ಮಾಡಿದಂತೆ ಸಾರಿಗೆ ದರವು ಏನು ಏರಿಕೆಯಾಗಿತ್ತು ಅವರ ಏರಿಕೆಯ ಲೆಕ್ಕದಲ್ಲಿ ನೋಡಿದಾಗ ಸಾಮಾನ್ಯ ಗ್ರಾಮಾಂತರ ಪ್ರದೇಶದ ಬಸ್‌ಗಳಿಗೆ 45 ಪರ್ಸೆಂಟ್ ಕಡಿಮೆಯಯಾಗಿದೆ, ವೇಗದೂತ ಬಸಗಳಿಗೆ 31.5ರಷ್ಟು ಕಡಿಮೆಯಾಗಿದೆ. ಅರೆಸುಖಾಸೀನ ಬಸ್‌ಗಳಿಗೆ ಶೇಕಡ 30ರಷ್ಟು ಕಡಿಮೆಯಾಗಿದೆ, ಹೈಟೆಕ್ ಬಸ್‌ಗಳಿಗೆ23 ಪರ್ಸೆಂಟ್‌ನಷ್ಟು ಕಡಿಮೆಯಾಗಿದೆ, ನಗರದ ಹೊರವಲಯ, ನಗರವಲಯ ಪುಷ್ಪಕ್ ಹಾಗೂ ಕೆಂಪುಬಸ್‌ಗಳ, ಸೇರಿದಂತೆ ನಗರ ಪ್ರದೇಶಗಳಲ್ಲಿ ಸಾಮಾನ್ಯ ಜನರು ಓಡಾಡುವಂಥ ಬಸ್‌ಗಳಲ್ಲಿ ಒಟ್ಟಾರೆ ನಮ್ಮ ಲೆಕ್ಕದಪ್ರಕಾರ ಕಡಿಮೆ ಮಾಡಿರುವುದು ಶೇಕಡ 38ರಷ್ಟು. ಆದರೆ ಇನ್ನೂ ಎರಡು ಪರ್‌ಸೆಂಟ್‌ನಷ್ಟು ಈ ಬಸ್‌ದರಗಳಲ್ಲಿ ಕಡಿಮೆ ಮಾಡಿದರೆ ಜನರು ಸ್ವಲ್ಪ ನೆಮ್ಮದಿಯಿಂದ ಉಸಿರಾಡಬಹುದೆಂದು ನನ್ನ ಭಾವನೆ. ಮಾನ್ಯ ಮುಖ್ಯಮಂತ್ರಿಯವರು ಕೆಎಸ್‌ಆರ್‌ಟಿಸಿ ಎಂಬ ರೋಗಿಯನ್ನು ಗುಣಪಡಿಸಲು ಜನತೆಯು ರಕ್ತ ಕೊಡಬೇಕೆಂದು ಹೇಳಿದ್ದಾರೆ. ಆದರೆ ಆಗಾಗ ರಕ್ತ ಕೇಳುವ ಪರಿಪಾಠವನ್ನು ಇಟ್ಟುಕೊಳ್ಳದೇ ರೋಗಿಯು ಕೂಡ ಜನತೆಯೊಂದಿಗೆ ಸಹಕರಿಸುವುದು ಬೇಡವೆ? ತಾವು ನಂಬುತ್ತೀರೋ ಇಲ್ಲವೋ ಗೊತ್ತಿಲ್ಲ. ಅಲ್ಲಿ ಒಂದು ರೀತಿ ಹಗಲು ದರೋಡೆಯೇ ನಡೆಯುತ್ತಿದೆ. ಇದನ್ನು ತಪ್ಪಿಸಿದರೆ ಒಳ್ಳೆಯದು. 5 ವರ್ಷಗಳಲ್ಲಿ ಮತ್ತೆ ತೆರಿಗೆಯನ್ನು ಏರಿಸುವ ಪರಿಸ್ಥಿತಿ ಬರದೆ ಒಳ್ಳೆಯ ರೀತಿಯಲ್ಲಿ ನಡೆಸಿ ನಾವೆಲ್ಲ ಸಹಕಾರ ಕೊಡುತ್ತೇವೆ. ಕೆ ಎಸ್ ಆರ್‌ಟಿಸಿ ಸಚಿವರು ಎಲ್ಲರೂ ಗಮನ ಕೊಟ್ಟು ಆ ಇಲಾಖೆ ಸರಿಯಾಗಿ ನಡೆಯುವಂತೆ ಕ್ರಮ ತೆಗೆದುಕೊಳ್ಳಬೇಕು. ಹೊಸ ಸಂಪ್ರದಾಯವನ್ನು ಖಂಡಿತವಾಗಿ ನಾವೆಲ್ಲರೂ ಹಾಕಿಕೊಳ್ಳೋಣ. ಕೆಇಬಿ, ಕೆಎಸ್‌ಆರ್‌ಟಿಸಿ ನೀರಾವರಿ ವಿಚಾರ ಬಂದಾಗ ರಾಜಕಾರಣ ಮಾಡುವಂಥ ಅಗತ್ಯವಿಲ್ಲ. ಜನರ ಅಭಿಪ್ರಾಯದಂತೆ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಬಂದಿರುವ ಪ್ರತಿನಿಧಿಗಳು ನಾವು. ನಾವು ಮಾತನಾಡುವ ಒಂದೊಂದು ಮಾತನ್ನೂ ಜನತೆ ಇದನ್ನು ಮಾತನಾಡಬೇಕೆಂದು ನಿರೀಕ್ಷೆ ಮಾಡಿರುತ್ತಾರೆ ಆ ಮಾತನ್ನು ನಾವು ಅವನ ಪರವಾಗಿ ಮಾತನಾಡುತ್ತೇವೆಯೇ ಹೊರತು ಇಲ್ಲಿ ಒಣ ಪ್ರತಿಷ್ಠೆಯ ಪ್ರಶ್ನೆ ಏನೂ ಇಲ್ಲ. ನಿಜ ಹೇಳಬೇಕೆಂದರೆ, ಸಂಪೂರ್ಣವಾಗಿ ನಮಗೆ ಯಾರಿಗೂ ಸಮಾಧಾನವಿಲ್ಲ. ದರ ಕಡಿಮೆ ಮಾಡಿರುವುದು ರಾಜ್ಯದ ಜನರಿಗೂ ಸಮಾಧಾನ ಇಲ್ಲ. ಆದರೆ ಇವತ್ತು ವಿಶೇಷವಾದಂತಹ ಸಂದರ್ಭದಲ್ಲಿ ನಾವು ಒತ್ತಾಯ ಮಾಡಿದೆವು, ನಿಮ್ಮನ್ನು ಕನ್‌ವಿನ್ಸ್ ಮಾಡುವ ಪ್ರಯತ್ನ ಮಾಡಿದೆವು. ತಾವು ಹಿಂದೆ ಮುಂದೆ ನೋಡದೆ ಇದನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿದ್ದೀರಿ. ಒಂದೇ ಒಂದು ವಿಚಾರವನ್ನು ತಾವು ಹೇಳುತ್ತೀರೆಂದು ನಾನು ಅಂದುಕೊಂಡಿದ್ದೆ. ನಾವು ಇದನ್ನು ಪ್ರಸ್ತಾಪ ಮಾಡಿರಲಿಲ್ಲ. ಆದರೆ ನಾನು ಮಾತನಾಡುವ ಕಾಲದಲ್ಲಿ ಹೇಳಿದ್ದೆ. ಕೆ.ಎಸ್.ಆರ್.ಟಿ.ಸಿ. ದರ ಏರಿಕೆ ಸಂದರ್ಭದಲ್ಲಿ ಕೆಲವು ಕಡೆಗಳಲ್ಲಿ ಕೇಸುಗಳನ್ನು ಹಾಕಿದ್ದಾರೆ. ವಿಶೇಷವಾಗಿ ಬೆಳಗಾಂನಲ್ಲಿ24 ಜನ ಹೆಣ್ಣುಮಕ್ಕಳು ಸೇರಿ 126 ಜನರ ಜೈಲಿನಲ್ಲಿ ಇದ್ದರು. ಬಳ್ಳಾರಿ ಬಿಜಾಪುರದಲ್ಲಿ ಕೇಸ್ ಹಾಕಿದ್ದಾರೆ. ಹೊಸದಾಗಿ ಬಂದ ನಮ್ಮ ಶಾಸಕರಾದ ಶ್ರೀ ರಾಜಶೇಖರ ಶೀಲವಂತ ಎಂಬುವವರ ಮೇಲೆ ಕೂಡ ಕೇಸ್ ದಾಖಲಾಗಿದೆ.

ನಮ್ಮನ್ನು ಎಲ್ಲ ಬಿಟ್ಟು ಅಲ್ಲಿ ಕೇಸಾಗಿದೆ. ಅಲ್ಲಿ ಏನೋ ವಿಶೇಷ ಸಂದರ್ಭ ಇರಬಹುದು. ಅವರು ಸಹಜವಾಗಿ ಶಾಂತಿ ರೀತಿಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆ ಕೇಸುಗಳನ್ನು ವಾಪಸ ತೆಗೆದುಕೊಳ್ಳುವುದಕ್ಕೆ ಹೇಳಬೇಕು. ನಮಗೆ ಬಹಳ ಪ್ರಮುಖವಾದ ವಿಷಯಗಳು ಇವೆ. ಒಂದು ಕಡೆ ಇದರ ರೇಟ್ ಕಡಿಮೆಯಾಗಬೇಕೆಂದು ಮತ್ತೊಂದು ಕಡೆ ಬಡ್ಜೆಟ್ ಮೇಲೆ ಚರ್ಚೆಯಾಗಬೇಕು. ಆಲಮಟ್ಟಿ ಬಗ್ಗೆ ಹೊಸ ಸಮಸ್ಯೆ ಉದ್ಭವವಾಗಿದೆ. ನಾವು ಒಂದು ಕ್ಷಣ ತಡಮಾಡಿದರೂ ತೊಂದರೆಯಾಗುತ್ತದೆ, ನಾವು ನಮ್ಮ ನಿಲುವನ್ನು ಸ್ಪಷ್ಟ ಮಾಡಬೇಕಾಗಿದೆ. ಇಂತಹ ವಿಶೇಷವಾದ ಸಂದರ್ಭದಲ್ಲಿ ಇಲ್ಲಿ ಕುಳಿತುಕೊಳ್ಳಬೇಕೆಂಬ ಉದ್ದೇಶ ಇಲ್ಲ. ನಮ್ಮ ಜನತೆಯ ಪರಿಸ್ಥಿತಿ ಏನು ಇದೆ ಇದನ್ನು ಅದರದ್ದೇ ಆದ ರೀತಿಯಲ್ಲಿ ಸರಕಾರಕ್ಕೆ ಮನವರಿಕೆ ಮಾಡಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ನಮಗೆ ಇದನ್ನು ಸಂಪೂರ್ಣವಾಗಿ ವಾಪಸ್ ತೆಗೆದುಕೊಳ್ಳಬೇಕೆಂದು ಇತ್ತು, ನಮಗೆ ಇದರಿಂದ ಸಂಪೂರ್ಣ ಸಮಾಧಾನವಾಗಿಲ್ಲ. ಸದನ ಸಮಿತಿ ಮಾಡಿದ್ದಿದ್ದರೆ ಹೇಗೆ ವಾಪಸ್ ತೆಗೆದುಕೊಳ್ಳಬೇಕೆಂದು ನಾವು ನಿಮ್ಮನ್ನು ಕನ್‌ವಿನ್ಸ್ ಮಾಡುತ್ತಿದ್ದೆವು, ಆದರೆ ಅದು ಆಗಲಿಲ್ಲ. ನೀವು ಬೇಗನೆ ಒಂದು ತೀರ್ಮಾನಕ್ಕೆ ಬರಬೇಕಾಗಿತ್ತು ನೀವು ಸಹಕರಿಸಿದ್ದೀರಿ ನಾವೂ ಸಹಕರಿಸಿದ್ದೇವೆ. ಒಂದೇ ಒಂದು ವಿನಂತಿ ಏನೆಂದರೆ, ಸಾಧ್ಯವಾದರೆ ಇದರ ಬಗ್ಗೆ ಇನ್ನೊಮ್ಮೆ ವಿಚಾರ ಮಾಡಿ. ಪರ್ಮನೆಂಟ್ ಆಗಿ ಒಂದು ಸ್ಟ್ಯಾಂಡಿಂಗ್ ಲೆಜಿಸ್ಲೇಚರ್ ಸಮಿತಿಯನ್ನು ಮಾಡಿ ಇದು ಕೆ.ಎಸ್.ಆರ್.ಟಿ.ಸಿಯ ಸಾಧಕ ಬಾಧಕಗಳ ಬಗ್ಗೆ 15 ದಿವಸ 1 ತಿಂಗಳಿಗೊಮ್ಮೆ ಸಭೆ ಸೇರಿ ಸೋರಿಕೆಯನ್ನು ತಡೆಯುವುದಕ್ಕೆ ವಿಚಾರ ಮಾಡಬಹುದು. ಜನ ಮಾತನಾಡುವ ಕಾಲದಲ್ಲಿ ಹೇಳುತ್ತಾರೆ. ತಮಗೆ ಗೊತ್ತಿರಬಹುದು. ತಾವೇ ತಮ್ಮ ಗೃಹ ಇಲಾಖಾ ವತಿಯಿಂದ ವರದಿ ತರಿಸಿಕೊಳ್ಳಿ ಏಕೆಂದರೆ ತಾವು ತಮ್ಮ ಕಡೆ ಇರುವವರು ಎಲ್ಲರೂ ಬಹಳ ಜನ ಕಾರಿನಲ್ಲಿ ಓಡಾಡುವವರು ಎಂದು ತಾವು ತಿಳಿದುಕೊಂಡಿದ್ದೀರಿ ಅದು ಸರಿಯಲ್ಲ. ಬಹಳ ಜನ ಅವರ ಹೆಂಡತಿ ಮಕ್ಕಳೂ ಬಸ್‌ನಲ್ಲಿ ಓಡಾಡುವವರು ಈ ಕಡೆಯೂ ಇದ್ದಾರೆ, ಆ ಕಡೆಯೂ ಇದ್ದಾರೆ. ಜನರ ಅಭಿಪ್ರಾಯವನ್ನು ಕಲೆಕ್ಟ್ ಮಾಡಿ. ಪರ್ಮನೆಂಟಾಗಿ ಲೆಜಿಸ್ಲೇಚರ್ ಸ್ಟ್ಯಾಂಡಿಂಗ್ ಸಮಿತಿ ಇದ್ದರೆ ಸೋರುವಿಕೆಯನ್ನು ತಡೆಯುವುದಕ್ಕೆ ಅನುಕೂಲವಾಗುತ್ತದೆ ತಾವು ಯೋಚನೆ ಮಾಡಿ. ಈ ಕೇಸುಗಳನ್ನೇನು ಹಾಕಿದ್ದೀರಿ ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಅದನ್ನೂ ತಾವು ಘೋಷಣೆ ಮಾಡಬೇಕು. ಇಷ್ಟೊಂದು ಸಹಕಾರ ನೀಡಿದ್ದಕ್ಕಾಗಿ ಜನತೆಯ ಪರವಾಗಿ ವಂದನೆ ಸಲ್ಲಿಸುತ್ತೇನೆ. ಅಲ್ಪಸ್ವಲ್ಪ ನೋವು ಇದೆ, ಆದರೂ ಕೆ.ಎಸ್.ಆರ್.ಟಿ.ಸಿ ಒಳ್ಳೆಯ ರೀತಿಯಲ್ಲಿ ನಡೆಯಬೇಕಾಗಿದೆ, ಇದು ಲಾಸ್‌ನಲ್ಲಿ ನಡೆಯದೆ, ಸೋರುವಿಕೆಯನ್ನು ತಡೆಯಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆಂದು ನಾನಾದರೂ ಅಂದುಕೊಂಡಿದ್ದೇನೆ. ಒಂದೇ ಒಂದು ವಿನಂತಿ. ನಾವು ನಿನ್ನೆ ರಾಜೀನಾಮೆ ಕೇಳಿದ್ದೇವು. ನಾವು ಮುಂದೆ ಯಾವಾಗ ಅಭಿನಂದನೆ ಸಲ್ಲಿಸುತ್ತೇವೆಂದರೆ ನೀವು ಇರುವವರೆಗೆ ಲಾಸಾಗಲಿಕ್ಕೆ ಬಿಡದೆ ಒಳ್ಳೆಯ ರೀತಿಯಲ್ಲಿ ನಡೆಸಿ ಒಂದು ಪೈಸೆ ತೆರಿಗೆಯನ್ನು ಹಾಕದೆ ಓಡಾಡುವ ಜನರಿಗೆ ಒಳ್ಳೆಯ ಸೌಕರ್ಯ ಒದಗಿಸಬೇಕು. ಬಸ್‌ಗಳನ್ನೂ ತೊಳೆಯುವಂತಹ ಕೆಲಸ ಮಾಡಬೇಕು ಮತ್ತು ಸಮಯಕ್ಕೆ ಸರಿಯಾದ ರೀತಿಯಲ್ಲಿ ಬಸ್ ಹೋಗುವಂಥಾದ್ದು ಈ ಕಡೆಗೆ ವಿಶೇಷವಾದ ಗಮನಹರಿಸಬೇಕು. ಕಂಡಕ್ಟರ್, ಡ್ರೈವರ್‌ಗೆ ಕಿರುಕುಳವಿದೆ ಹಾಗೂ ಈ ವರ್ಷ 700

ಅಪಘಾತವಾಗಿದೆ. ಅದಕ್ಕೆ 30-35 ಕೋಟಿ ಪರಿಹಾರ ಕೊಟ್ಟಿದ್ದೀರಿ. ಇದರ ಕಡೆಗೆ ವಿಶೇಷವಾದ ಗಮನ ಕೊಡಬೇಕೆಂದು ನನ್ನ ವಿನಂತಿ. ತಾವು ಕೂಡ ನಮಗೆ ಸಹಕಾರ ಕೊಟ್ಟಿದ್ದೀರಿ ತಮಗೆ ವಂದನೆಗಳು. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ತಮ್ಮ ಕೊಠಡಿಲ್ಲಿ ಕುಳಿತು ಚರ್ಚೆ ಮಾಡುವ ಕಾಲದಲ್ಲಿ ತಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸದೆ ಈ ರೀತಿಯಾಗಿದೆ ಎಂದು ತಿಳಿಸಿದ್ದಕ್ಕೆ ಒಳ್ಳೆಯ ತೀರ್ಮಾನಕ್ಕೆ ಬಂದರಲ್ಲ ಎಂದು ಸಂತೋಷ ವ್ಯಕ್ತಪಡಿಸಿದ್ದೀರಿ. ಇತಿಹಾಸದಲ್ಲಿ ಮೊದಲ ಬಾರಿಗೆ ಅಧ್ಯಕ್ಷರು ರಾತ್ರಿ 10 ಗಂಟೆಗೆ ಇಲ್ಲಿಗೆ ಬಂದು ನಮ್ಮ ಪರಿಸ್ಥಿತಿಗಳನ್ನು ನಮಗೆ ಅರಿತು ಎಲ್ಲಾರೀತಿ ವ್ಯವಸ್ಥೆಯನ್ನು ಮಾಡಿ ಒಳ್ಳೆಯ ರೀತಿಯಿಂದ ತಾವು ಸೌಜನ್ಯದಿಂದ ಸಹಕಾರ ನೀಡಿದ್ದೀರಿ. ಸ್ವಲ್ಪ ತಮಗೆ ಕಿರಿಕಿರಿ ತೊಂದರೆಯಾದರೂ ಸಹಿಸಿಕೊಂಡು ನಮಗೆ ಪೂರ್ಣ ಸಹಕಾರ ಕೊಟ್ಟಿದ್ದೀರಿ ಅದಕ್ಕಾಗಿ ತಮಗೂ ಅಭಿನಂದನೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಎನ್. ನಂಜೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಯಾವ ಪೇಷೆಂಟಿಗೆ ಹೆಚ್ಚಿಗೆ ರಕ್ತ ಕೊಡುತ್ತಾನೆ ಹೇಳಿ. ಯಾರು ಅಪಘಾತವಾಗಿ ಕಾಲು ಮುರಿದುಕೊಳ್ಳುತ್ತಾನೆ ತಲೆ ಒಡೆದುಕೊಳ್ಳುತ್ತಾನೆ. ರಕ್ತ ಜಾಸ್ತಿ ಹೋಗುತ್ತದೆ ಆತನಿಗೆ ರಕ್ತ ಹೆಚ್ಚು ಕೊಡಬೇಕಾಗುತ್ತದೆ. ದಿವಸವೂ ತಲೆ ಒಡೆದುಕೊಂಡು ಕಾಲು ಮುರಿದುಕೊಂಡರೆ ಜನ ಎಷ್ಟು ಸಲ ರಕ್ತ ಕೊಡುತ್ತಾರೆ. 83ರಲ್ಲಿ ಏರಿಸಿದ್ದಾರೆ 88ರಲ್ಲಿ ಏರಿಸಿದ್ದಾರೆ, 90 ರಲ್ಲಿ ಏರಿಸ್ದಾದರೆ, 93 ರಲ್ಲಿ ಏರಿಸಿದ್ದಾರೆ. ಹಳ್ಳಿ ಕಡೆಗಳಲ್ಲಿ ಜನರು ಬಸ್‌ಗಳ ಟಾಪ ಮೇಲೆ ಕುಳಿತಿರುತ್ತಾರೆ. ಲಾಸ್ ಒಂದೇ ತೋರಿಸಿರುತ್ತಾರೆ. ಕೆ. ಎಸ್. ಆರ್. ಟಿ.ಸಿಯಲ್ಲಿ ಏನಾಗಿದೆ ಎಂದರೆ, ವರ್ಕ್ ಕಲ್ಚರ್ ಇಲ್ಲ. ನೀವು ಟ್ರೈನಿಂಗ್ ಕೊಡುತ್ತೀರೋ, ಸ್ಪೆಷಲ್‌ಕ್ಲಾಸ್ ಇಂಟ್ರಡ್ಯೂಸ್ ಮಾಡುತ್ತೀರೋ ನನಗೆ ಗೊತ್ತಿಲ್ಲ. ಅಲ್ಲಿರತಕ್ಕಂತಹ ಕಾರ್ಮಿಕರು ಈ ಸಂಸ್ಥೆ ನಮ್ಮ ಸುಖಕ್ಕೆ, ನಮ್ಮ ಸಂಸಾರವನ್ನು ಸಾಕುವುದಕ್ಕೆ ಇದೆ ಎಂಬ ಕಲ್ಚರ್ ಬಂದಿದೆ. ಇಲ್ಲದಿದ್ದರೆ ಸ್ಟ್ರೈಕ್ ಮಾಡುತ್ತಾರೆ. ಎಲ್ಲೋ ಒಂದು ಸಣ್ಣ ಗಲಾಟೆಯಾದರೆ 50 ಜನ ಡ್ರೈವರ್ಸ್ ಸುತ್ತಲೂ ಸುತ್ತಿಕೊಂಡು ಕುಳಿತುಕೊಂಡು ಬಿಡುತ್ತಾರೆ. ಅಂದರೆ ಕೆ.ಎಸ್.ಆರ್.ಟಿ.ಸಿಯನ್ನು ಸಾರ್ವಜನಿಕರ ಹಿತಕ್ಕಾಗಿ ಮಾಡಿದ್ದು ಎಂಬ ಅಭಿಪ್ರಾಯ ಹೊರಟು ಹೋಗಿದೆ. ಏನಾದರೂ ಮಾಡಿ ಆ ಮೋಡ್ ಆಫ್ ಥಿಂಕಿಂಗ್ ಏನು ಇದೆ ಇದು ಬದಲಾವಣೆಯಾಗುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಸಾರ್ವಜನಿಕರ ಹಿತಕ್ಕಾಗಿ ಕೆ.ಎಸ್.ಆರ್.ಟಿ.ಸಿಯನ್ನು ಮಾಡಿದ್ದು ಎಂಬುದನ್ನು ಅವರಿಗೆ ಅರ್ಥ ಮಾಡಿಸಬೇಕು. ಬೆಂಗಳೂರಿನಲ್ಲಿ ಟೂ ವೀಲರ್ಸ್ ಕಾರುಗಳು ಬಹಳ ಹೆಚ್ಚಾಗಿವೆ. ಕೆ.ಎಸ್.ಆರ್.ಟಿ.ಸಿ ಬಸ್‌ಗಳು ಸರಿ ಇದ್ದರೆ ಜನರು ತಮ್ಮ ವೆಹಿಕಲ್ಸ್ ಎಲ್ಲವನ್ನು ಮನೆಯಲ್ಲಿ ಇಡುತ್ತಾರೆ. ವೆಹಿಕಲ್ ತೆಗೆದುಕೊಂಡಿದ್ದರೂ ಅದನ್ನು ಮನೆಯಲ್ಲಿ ಇಡುತ್ತಾರೆ. ಬಸ್‌ಗಳು ಸಮಯಕ್ಕೆ ಸರಿಯಾಗಿ ಹೊರಡುತ್ತವೆ ಸೀಟು ಸಿಗುತ್ತದೆ ಎಂದರೆ ಈ ಕೆಲಸ ಮಾಡುತ್ತಾರೆ. ಅಲ್ಲಿ ನಿಂತುಕೊಂಡು ಆ ರಷ್‌ನಲ್ಲಿ ಹೋಗಬೇಕು, ಇದರಲ್ಲಿ ಪಿಕ್‌ಪಾಕೆಟ್ ಎಷ್ಟಾಗುತ್ತವೆ. ಲಾಂಗ್ ಜರ್ನಿಗೆ ಲಕ್ಸುರಿ ಬಸ್ ಇವೆಲ್ಲಾ ಆದ ಮೇಲೆ ಕಾರಿದ್ದರೂ ಜನರು ಬಸ್‌ನಲ್ಲೇ ಹೋಗುತ್ತಾರೆ. ಆಲ್‌ಟರ್‌ನೇಟೀವ್ ಆಗಿ ಸೌಲಭ್ಯ ಕೊಟ್ಟರೆ ಜೋಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಅದನ್ನು ತಾವು ಗಮನದಲ್ಲಿ ಇಡಬೇಕು. ಕೆ.ಎಸ್.ಆರ್.ಟಿ.ಸಿ ಬಹಳ ಇಂಪ್ರೂವಾಗಬೇಕು. ಬಸ್‌ನ ದರ ಏರಿಸಿಯೇ ಇದನ್ನು ರಿಪೇರಿ ಮಾಡುತ್ತೇವೆ ರಕ್ತ ಕೊಟ್ಟೇ ಸರಿಪಡಿಸುತ್ತೇವೆಂದ ಹೇಳಿದರೆ ಆಗುವುದಿಲ್ಲ.

ಅದು ಆಹಾರ ತಿನ್ನಬೇಕು ಅಪಘಾತವನ್ನೂ ಮಾಡಿಕೊಳ್ಳಬಾರದು ಚೆನ್ನಾಗಿ ಇರಬೇಕು ಆ ಕಡೆಗೆ ತಾವು ಗಮನ ಕೊಡಬೇಕು. ಕೆಎಸ್ಆರ್‌ಟಿಸಿ ನೌಕರ ವರ್ಗದವರಿಗೂ ಕಾರ್ಮಿಕರಿಗೂ ಹೇಳಿ. ಜೊತೆ ಜೊತೆಯಲ್ಲೇ ಖಾಸಗಿಯವರಿಗೂ ಕೆಲವು ರೂಟ್ಸ್ ಅನ್ನು ಕೊಡಿ. Let them run in competition with others. ಖಾಸಗಿ ಬಸನವರು ಯಾವ ರೀತಿ ಮಾಡುತ್ತಾರೆ. ಎರಡು ಬಸ್ ಇರುವವನು ಲಾಭ ಮಾಡಿಕೊಂಡು ಹತ್ತು ವರ್ಷದಲ್ಲಿ 10 ಬಸ್ ಮಾಡುತ್ತಾನೆ. ಇಲ್ಲಿ ಈ ರೀತಿ ಏಕೆ ಆಗುತ್ತದೆ. ಕೆಎಸ್ಆರ್.ಟಿಸಿ ಅಂದರೆ ಇದು ತಿನ್ನುವುದದಕ್ಕೆ ಇರುವುದೇ. ಈ ರೀತಿ ಆಗತಕ್ಕದ್ದಲ್ಲ. ಇದೊಂದು ಕಮರ್ಷಿಯಲ್ ಆರ್ಗನೈಸೇಷನ್ ಆಗಿ ನಡೆಯಬೇಕು. ನೀವು ನಾವು ಸರ್ವೀಸ್ ಆರ್ಗನೈಸೇಷನ್ ಎಲ್ಲಿ ಮಾಡುತ್ತೇವೆಂದರೆ ತೀರಾ ಯಾವುದೋ ಒಂದು ಹಳ್ಳಿಗೆ ಬಸ್‌ಗಳನ್ನು ಖಾಸಗಿಯವರು ಹಾಕುವುದಿಲ್ಲ. ಅಲ್ಲಿ ಪೊಟೆನಷಿಯಲ್ ಇರುವುದಿಲ್ಲವೆಂದು ಹಾಕುವುದಿಲ್ಲ. ಅದಕ್ಕಾಗಿ ನಾವು ಹಾಕುತ್ತೇವೆಯೇ ಹೊರತು ಲಾಸ್ ಮಾಡಿಕೊಂಡು ವರ್ಷ ಪೂರ್ತಿ ನಾವು ಸಬ್ಸಿಡೈಸ್ಡ್ ಮಾಡಿ ಮಾಡುವುದಕ್ಕಾಗುವುದಿಲ್ಲ. ಇದನ್ನು ಲಾಸ್ ಮಾಡಿಕೊಳ್ಳುತ್ತಾ ನಾವು ಸಬ್ಸಿಡೈಸ್ ಮಾಡುವುದಕ್ಕಾಗುವುದಿಲ್ಲ ಅಥವಾ ಜನಗಳ ಮೇಲೆ ಹಾಕುವುದಕ್ಕೂ ಆಗುವುದಿಲ್ಲ. ಇದನ್ನು ತತ್ವಶಃ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ತಾವು ಎಲ್ಲಾ ಕೇಟಗರಿಯಲ್ಲೂ ಹೇಳಿದ್ದೀರಿ. ಬಿಟಿಎಸ್ ಬಸ್ ಪುಷ್ಪಕ್, ಬೆಂಗಳೂರು ಮಫ್ಯೂಸಲ್‌ಗೆ ನ್ಯಾಷನಲೈಸ್ ಮಾಡುತ್ತೇವೆಂದು ಹೇಳಿದ್ದೀರಿ. ಇಲ್ಲಿ ನೀವು ಕೊಡುವುದರಲ್ಲೇನೋ 5 ಪೈಸೆ ಹೆಚ್ಚಿಸಿದ್ದೀವೆ 16 ಪೈಸೆ ಪುಷ್ಪಕ್‌ಗೆ ಮೊಫಿಷಿಯಲ್‌ಗೆ 5 ಪೈಸೆ ಎಂದರೂ ಕೂಡ ಅದು ಆ ರೀತಿಯಾಗಿಲ್ಲ.30 ಪರ್ಸೆಂಟ್‌ನಿಂದ ಹಿಡಿದು 200 ಪರ್ಸೆಂಟ್‌ನವರೆಗೆ ಏರಿಕೆಯಾಗಿದೆ. ಆ ಟ್ಯಾರಿಫ್ ನೋಡಿದರೆ ತಿಳಿಯುತ್ತದೆ. ಬಿ.ಟಿ.ಎಸ್. ಪುಷ್ಪಕ್, ಮೊಫಿಷಿಯಲ್ ಪುಷ್ಪಕ್‌ನಲ್ಲಿ ಆ ರೀತಿಯಾಗಿದೆ. ಅದನ್ನು ನ್ಯಾಷನಲೈಸ್ ಮಾಡಿ. ದಯಮಾಡಿ ಇದು ಯಾವುದೇ ಕಾರಣಕ್ಕೂ 25 ಪರ್ಸೆಂಟ್ ಮೇಲೆ ಏರಬಾರದು. ಬಿ.ಟಿ.ಎಸ್. ಆಗಲಿ ಮತ್ತೊಂದಾಗಲಿ ಹಾಲಿ ಇರತಕ್ಕಂಥಾದ್ದರಲ್ಲಿ25 ಪರ್ಸೆಂಟ್‌ಗಿಂತ ಹೆಚ್ಚಾಗಬಾರದು. ಇದಕ್ಕೂ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಇವತ್ತ ನನಗಂತೂ ಗಾಬರಿಯಾಯಿತು. ನಮ್ಮಸಭೆ ನಡೆಯುತ್ತದೆಯೋ ಇಲ್ಲವೋ ಧರಣಿ ಎಂದು ನಾವು ಕುಳಿತುಕೊಳ್ಳುವುದು, ನೀವು ಬಂದು ಇಲ್ಲಿ ಓಟ್ ಅನ್ ಅಕೌಂಟ್‌ಅನ್ನು ಪಾಸ್ ಮಾಡಿಕೊಂಡು ಹೋಗುವುದಕ್ಕೆ ಸುಲಭವಾಗುತ್ತದೆ. ನಾವು ಹಠ ಮಾಡಿದರೆ ನಿಮಗೆ ತಪ್ಪಿಸಿಕೊಂಡು ಹೋಗುವುದಕ್ಕೆ ಸುಲಭವಾಯಿತು. ಇನ್ನೂ ಹೇಳುವ ವಿಚಾರಗಳು ಬಹಳ ಇವೆ, ಆಲಮಟ್ಟಿ ವಿಚಾರ ಇದೆ, ಬೇಕಾದಷ್ಟು ಇದೆ. ಆದ್ದರಿಂದ ಈ ಸಭೆ ನಡೆಯಬೇಕು. ಇದರ ವಿಚಾರದಲ್ಲಿ ತಾವು ತುಂಬಾ ಸಹಕಾರ ಕೊಟ್ಟಿದ್ದೀರಿ ಇಲ್ಲವೆಂದು ಹೇಳುವುದಿಲ್ಲ. ಆದರೂ ಎಫಿಷಿಯೆನ್ಸಿ ಇಂಪ್ರೂವ್ ಮಾಡಿ. ಏರಿಸಿರುವ ದರವನ್ನು ಅಲ್ಲ. ನಿಮ್ಮ ಕಾಲದಲ್ಲಿ ಒಂದು ಸಾರಿಯಾದರೂ ಒಂದು ವರ್ಷ ಬಿಟ್ಟು ಇರತಕ್ಕಂತಹ ಹಾಲಿ ದರದಲ್ಲಿ ಇಷ್ಟು ಇಳಿಸಿದ್ದೇವೆಂದು ನೀವು ಹೇಳಿದರೆ ನೀವು ಮುಖ್ಯ ಮಂತ್ರಿಯಾಗಿ ಎಂದು ಹಾರೈಸುತ್ತೇನೆ. ನಿಮ್ಮ ಭುಜ ತಟ್ಟಿ ಹೊಗಳುತ್ತೇವೆ. ದರ ಇಳಿಸುತ್ತೇವೆಂದು ಹೇಳತಕ್ಕಂತಹ ಶಕ್ತಿ ಕೆ.ಎಸ್.ಆರ್.ಟಿ.ಸಿಗೆ ಬರಬೇಕು. ಭಗವಂತ ಅದನ್ನು ಮಾಡಿಕೊಡಲಿ ಎಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮಗೆ ಗೊತ್ತಿಲ್ಲ, ಈಗಾಗಲೇ ಅವರು ಒಂದು ಕೇಸ್ ಅನ್ನು ಕ್ವೋಟ್ ಮಾಡಿದ್ದಾರೆ. ಎಲ್ಲ ಸಾರಿಗೆ ಮಂತ್ರಿಗಳು ಮುಖ್ಯಮಂತ್ರಿಗಳಾಗಿದ್ದಾರೆ, ನನ್ನದೂ ಒಂದು ಚಾನ್ಸ್ ಇರಬಹುದು ನೋಡೋಣ ಎಂದು ಕ್ವೋಟ್ ಮಾಡಿದ್ದಾರೆ.

ಶ್ರೀ ಹೆಚ್.ಎನ್.ನಂಜೇಗೌಡ : ಆದ್ದರಿಂದ ಆ ಕಡೆಗೆ ಯೋಚನೆ ಮಾಡಲಿ. ಎಫಿಷಿಯೆನ್ಸಿ ಇಂಪ್ರೂವ್ ಆಗಲೇಬೇಕು. ಮತ್ತು ಕೇಸುಗಳನ್ನೆಲ್ಲ ವಾಪಸ್ ತೆಗೆದುಕೊಳ್ಳಬೇಕು. ಅವರಿಗೆ ತರಬೇತಿ ಕೊಡಿ ಪಾಠ ಹೇಳಿ ಕ್ಲಾಸುಗಳನ್ನು ಇಡಿ. ಸತ್ಯಾಗ್ರಹ ಮಾಡಿದವರ ಮೇಲೆ ಹಾಕಿರುವ ಕೇಸುಗಳನ್ನು ವಾಪಸ್ ತೆಗೆದುಕೊಳ್ಳಬೇಕು. ಜೈಲಿನಲ್ಲಿ ಇರುವವರನ್ನು ಬಿಡುಗಡೆ ಮಾಡಿ. ಎಲ್ಲ ಸುಖಾಂತವಾಗಿ ಅಂತ್ಯಗೊಂಡಿರುವ ಕಾಲದಲ್ಲಿ ಆ ಕಾರ್ಮಿಕ ಮುಖಂಡರು ಬಂಧುಗಳೆಲ್ಲ ಜೈಲಿನಲ್ಲಿ ಇರುವುದು ಕೇಸಿಗಾಗಿ ಓಡಾಡುವುದು ಬೇಡಿ. ಸತ್ಯಾಗ್ರಹದಲ್ಲಿ ಇದಕ್ಕೆ ಸಂಬಂಧಪಟ್ಟವರಲ್ಲವೇ? ಇದಕ್ಕಾಗಿ ಯಾರ್ಯಾರು ಸತ್ಯಾಗ್ರಹ ಮಾಡಿದರು, ಗಲಾಟೆ ಇವೆಲ್ಲಾ ಶುರುವಾದವಲ್ಲ, ಬಸ್ ತಡೆ ಚಳುವಳಿ, ಮತ್ತೊಂದು ಚಳುವಳಿ ಇನ್ನೊಂದು, ಕಾಂಗ್ರೆಸ್ ಕಾರ್ಯಕರ್ತರು ಇರಬಹುದು, ಬಿಜೆಪಿ ಕಾರ್ಯಕರ್ತರು ಇರಬಹುದು, ಸಾರ್ವಜನಿಕರು ಇರಬಹುದು, ಅವರನ್ನೆಲ್ಲಾ ಬಿಡುಗಡೆ ಮಾಡುವ ಒಂದು ಸಹೃದಯವನ್ನು ಪ್ರದರ್ಶನ ಮಾಡಿ ಎಂದು ಹೇಳಿ ವಿನಂತಿಸಿಕೊಳ್ಳುತ್ತೇನೆ. ಕೇಸ್‌ನ್ನು ವಿತ್‌ಡ್ರಾ ಮಾಡಿಯೇ ಮಾಡುತ್ತಾರೆ. ಮಾನ್ಯ ಅಧ್ಯಕ್ಷರೇ, ತಮಗೂ ಕೂಡ ವಂದಿಸುತ್ತೇನೆ. ನಿನ್ನೆ ಎ.ಸಿ. ಎಲ್ಲಾ ಆಫ್ ಮಾಡಿಬಿಟ್ಟಿದ್ದರಂತೆ. ಇವತ್ತು ಆಫ್ ಮಾಡಿದ ಅನುಭವ ಬರುತ್ತಾ ಇದೆ. ಎಸಿಯನ್ನು ಕಡಿಮೆ ಹಾಕಿದ್ದಾರೆ ಎಂದು ಕಾಣುತ್ತದೆ. ನಿನ್ನೆ ತಾವು ಬಂದು ಎಸಿ ಹಾಕಿಸಿ ಸದಸ್ಯರ ಯೋಗ ಕ್ಷೇಮವನ್ನು ನೋಡಿಕೊಂಡಿದ್ದೀರಿ. ನಿಮಗೆ ಸದಸ್ಯರ ಹಿತ, ಅವರ ಕ್ಷೇಮ, ಸದಾ ಕಳಕಳಿಯನ್ನು ಅವರ ಬಗ್ಗೆ ಇಟ್ಟುಕೊಂಡಿದ್ದೀರಿ. ಅದಕ್ಕಾಗಿ ನಿಮಗೂ ಕೂಡ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಒಬ್ಬ ರೋಗಿಗೆ ರಕ್ತ ಕೊಡಿ ಎಂದು ಕೇಳುವುದು ನಮ್ಮ ಸಂಪ್ರದಾಯ, ಆದ್ದರಿಂದ ದರವನ್ನು ಜಾಸ್ತಿ ಮಾಡಿದ್ದೇವೆ ಎಂದು ಹೇಳಿದಿರಿ. ರೋಗಿಗೆ ರಕ್ತ ಕೇಳಬಹುದು. ರೋಗಿ ಉಳಿಸಲೇಬೇಕು, ರಕ್ತ ಕೊಡಲೇಬೇಕು.ಆದರೆ ರಕ್ತ ಹೀರುವುದಕ್ಕೆ ಹೊರಟರೆ ಪರಿಸ್ಥಿತಿ ಹೇಗೆ? ರಕ್ತ ಕೇಳುವುದು ಬೇರೆ. ರಕ್ತ ಹೀರುವುದು ಬೇರೆ. ಆದ್ದರಿಂದ ಈಗಿನ ಬಸ್‌ನ ದರ ಏರಿಸಿರುವ ರೀತಿ ನೀತಿ ನಾಲ್ಕು ವರ್ಷಗಳಿಂದ ಯಾರೂ ಏರಿಸಿಲ್ಲ, ಆದ್ದರಿಂದ ಅದನ್ನು ಏರಿಸಿದ್ದೇವೆ ಎಂದು ಹೇಳಿದರೆ ಅದು ರಕ್ತ ಹೀರುವಷ್ಟೇ ಒಂದು ಪರಿಸ್ಥಿತಿ. ಆದ್ದರಿಂದ ರಕ್ತ ಹೀರುವ ವ್ಯವಸ್ಥೆಗೆ ಹೋಗದೆ ರಕ್ತ ಕೇಳಿದರೆ ಜನರು ಕೊಡುವುದಕ್ಕೆ ತಯಾರಾಗಿದ್ದಾರೆ. ಈಗ ಆ ಸಂಸ್ಥೆ ಏನೂ ಬೇರೆಯವರದಲ್ಲ, ಕಾಡಿನದೇನೂ ಅಲ್ಲ, ಅದು ಜನರು ಕಟ್ಟಿರುವ ಸಂಸ್ಥೆ. ಆ ಸಂಸ್ಥೆ ಉಳಿಯಬೇಕು. ನಮ್ಮ ರಾಷ್ಟ್ರೀಕರಣ ನೀತಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಒಂದು ಪ್ರಮುಖವಾದ ಸಂಸ್ಥೆ. ಆ ಸಂಸ್ಥೆ ಉಳಿಯಬೇಕು. ಇತ್ತೀಚಿನ ದಿನಗಳಲ್ಲಿ ಯಾವುದೇ ಚಳುವಳಿ ನಡೆದರೂ ಅದು ಕೆಂಪು ಬಸ್‌ನ ಮೇಲೆ ತೀರ್ಮಾನವಾಗುತ್ತದೆ. ಕೆಂಪು ಬಸ್ ನಿಲ್ಲಬೇಕು. ಕೆಂಪು ಬಸ್ ಸುಡಬೇಕು. ಈ ರೀತಿಯ ಒಂದು ತೀರ್ಮಾನಕ್ಕೆ ಇತ್ತೀಚಿನ ದಿನಗಳಲ್ಲಿ ಬಂದು ಬಿಟ್ಟಿದೆ. ಈ ಕೆಂಪು ಬಸ್ ಆ ಸಂಸ್ಥೆ ಅದು

ತೋಟದಪ್ಪನ ಛತ್ರವೂ ಆಗುವುದಕ್ಕೆ ಆಗುವುದಿಲ್ಲ. ಆ ಸಂಸ್ಥೆಯನ್ನು ಉಳಿಸಬೇಕಾದ್ದುದು ಕರ್ತವ್ಯ. ಈ ದೃಷ್ಟಿಯಲ್ಲಿ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕು ಎಂಬ ಉದ್ದೇಶ ತಮ್ಮಲ್ಲಿದೆ ಎಂದು ನಾನು ಅಂದುಕೊಂಡಿದ್ದೇನೆ. ಆ ಉದ್ದೇಶದಿಂದ ತಮಗೆ ನಾನು ಎರಡು ಸಲಹೆಗಳನ್ನು ಕೊಡುತ್ತೇನೆ. ಕಾರ್ಮಿಕ ವರ್ಗ, ಕಾರ್ಮಿಕರು ಮತ್ತು ಸರ್ಕಾರ, ಬೇರೆ ಏನೂ ಅಲ್ಲ. ಅವರು ಬಹಳ ಕಟುವಾದ ಭಾಷೆಯಲ್ಲಿ ಹೇಳಿದ್ದಾರೆ. ಅನೇಕ ಕಟುವಾದ ಭಾಷೆಯಲ್ಲಿ ಸಚಿವರ ಬಗ್ಗೆ ಮಾತನಾಡಿದ್ದಾರೆ. ಅದೆಲ್ಲವನ್ನೂ ನಾನು ಒಪ್ಪುತ್ತೇನೆ. ಸಾಮಾನ್ಯವಾಗಿ ಸರ್ಕಾರ ಸಚಿವರು ಇರುವಾಗ ಕಾರ್ಮಿಕರು ಹೇಳುವಂಥದ್ದು ಸ್ವಭಾವ. ಅದರಲ್ಲೇನೂ ಬೇರೆ ಮಾತಿಲ್ಲ.

ಒಬ್ಬ ಮಾನ್ಯ ಸದಸ್ಯರು : ಅವರು ಬೈದದ್ದೆಲ್ಲಾ ಒಪ್ಪಿಕೊಳ್ಳುತ್ತಾರಂತೆ.

ಶ್ರೀ ವಾಟಾಳ್ ನಾಗರಾಜ್ : ಸ್ವಲ್ಪ ದಯಮಾಡಿ ಕೇಳಿಬಿಡಿ. ಅವರು ಏನು ಬೈದಿದ್ದಾರೆ ಎಂದು ನಾನು ಹೇಳಿದೆನೊ?

ಶ್ರೀ ಸಿ. ಭೈರೇಗೌಡ : ಅವರು ಕೆಲವು ಬಸ್‌ಗಳ ಮೇಲೆ ಬರೆಸಿರುವುದು, ಕಾಗದ ಅಂಟಿಸಿರುವುದು ಇದೆಲ್ಲವನ್ನೂ ಕೂಡ ಮಾಡಿದ್ದಾರಲ್ಲ, ಹಾಗಾದರೆ ಅವೆಲ್ಲವನ್ನೂ ಸಹ ತಾವು ಒಪ್ಪಿಕೊಳ್ಳುತ್ತೀರೋ?

ಶ್ರೀ ವಾಟಾಳ್ ನಾಗರಾಜ್ : ಬಯ್ಯುವ ಭಾಷೆಗಿಂತ ಹೆಚ್ಚಾಗಿ ಕೆಲವು ಕಡೆ ಬೆಂಕಿ ಇಟ್ಟು ಮನುಷ್ಯನನ್ನೇ ಸುಟ್ಟಿರುವ ಹೋರಾಟಗಳು ನಡೆದಿಲ್ಲವೇ? ನಾನು ಒಪ್ಪಿಕೊಂಡೆ ಎನ್ನುವುದಕ್ಕಿಂತ ಹೆಚ್ಚಾಗಿ ಯಾವ ಭಾಷೆ ಉಪಯೋಗಿಸಿದ್ದಾರೆ ಏನು ಎಂದು ಅದರ ಬಗ್ಗೆ ವಾದ ಮಾಡುವ ವಿಚಾರ ಬೇರೆ. ಹಾಗಾದರೆ ಕಾರ್ಮಿಕರನ್ನು ಬಿಟ್ಟು ಸಾರಿಗೆ ಸಂಸ್ಥೆಯು ನಡೆಯುವುದಕ್ಕೆ ಸಾಧ್ಯವೇ? ಸಾಧ್ಯವಾಗುವುದಿಲ್ಲ. ಆದ್ದರಿಂದ... ನೀವುಗಳು ಏತಕ್ಕೆ ನಗುತ್ತಿದ್ದೀರಿ ಎಂದು ಸಭೆಗೆ ಗೊತ್ತಾಗಲಿ. ನಂಜೇಗೌಡರು ನಗುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಮಾತನಾಡುವ ಸಂದರ್ಭದಲ್ಲಿ ಅಧ್ಯಕ್ಷರು ಇಲ್ಲಿ ಇದ್ದಾರೆ. ಅಧ್ಯಕ್ಷರ ಕಡೆಗೆ ಮುಖ ಮಾಡಿ ಮಾತನಾಡಿ. ಭೈರೇಗೌಡರ ಕಡೆಗೆ ಹೋಗಬೇಡಿ. ಸುಮ್ಮನೆ ಅನಾವಶ್ಯಕ ನಮ್ಮ ಮಾತಿನ ವಾದ ಸರಣಿಗೆ ಅಡ್ಡ ಬರುತ್ತಾರೆ ಎನ್ನುವ ದೃಷ್ಟಿಯಿಂದ ನಿಮ್ಮನ್ನು ಈ ಕಡೆ ನೋಡಿ ಎಂದು ಹೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್ : ನಾನು ಅಧ್ಯಕ್ಷರನ್ನು ನೋಡುತ್ತಿದ್ದೆ. ಪಾಪ, ಮುನಿಸಿಕೊಂಡು ಕುಳಿತಿದ್ದಾರೆ. ಅವರ ಬಗ್ಗೆ ನನಗೆ ಬಹಳ ನೋವಾಗುತ್ತಿದೆ. ನಗುತ್ತಾ ಇಲ್ಲ, ಈಗ ನಕ್ಕರು. ಈಗ ನನಗೆ ಬಹಳ ಸಂತೋಷ ಏಕೆಂದರೆ ಅಷ್ಟು ಹೊತ್ತಿನಿಂದ ಅವರು ನಗಲಿಲ್ಲ. ಇಡೀ ಸಭೆಯೇ ನಗುತ್ತಾ ಇದೆ. ಆದರೂ ನಗದೇ ಕುಳಿತಿದ್ದರು. ಈಗ ವಿಷಯಾಂತರ ಆಗುವುದು ಬೇಕಾಗಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲೂ ಮತ್ತು ಸಾರಿಗೆ ಸಚಿವರಲ್ಲೂ ಕಳಕಳಿಯಿಂದ ಮನವಿ ಮಾಡುತ್ತೇನೆ. ಅವರು ಬಯ್ದಿರುವುದನ್ನೆಲ್ಲಾ ಒಪ್ಪಿಕೊಂಡೆ ಎನ್ನುವ ಭಾವನೆಯಲ್ಲಿ ತಾವು ಯಾರೂ ತೀರ್ಮಾನ ಮಾಡಬೇಕಾಗಿಲ್ಲ.

ಆ ಸಂಸ್ಥೆ ಉಳಿಯಬೇಕು ಎಂದರೆ ಕಾರ್ಮಿಕರು ಮತ್ತು ಸಂಸ್ಥೆ ಎರಡೂ ಒಂದಾಗಬೇಕಾಗುತ್ತದೆ. ಅದನ್ನು ಬಿಟ್ಟು ನೀವು ಮಾಡುವುದಕ್ಕೆ ಸಾಧ್ಯವಿಲ್ಲ. ಕಾರ್ಮಿಕರನ್ನು ಬಿಟ್ಟಿದ್ದೇವೆ, ನಾವು ನೋಡುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಕಾರ್ಮಿಕರು ಇದ್ದರೆ ಆ ಸಂಸ್ಥೆ . ಆ ಸಂಸ್ಥೆ ಉಳಿಯಬೇಕಾದರೆ, ಬೆಳೆಯಬೇಕಾದರೆ ಅವರು ಬೇಕು. ಸರ್ಕಾರದಲ್ಲಿರುವವರು ಅವರನ್ನು ಕರೆದು ಸೌಜನ್ಯದಲ್ಲಿ ಮಾತನಾಡಬೇಕೆಂದು ನನ್ನ ಸಲಹೆ. ತಾವು ಅದನ್ನು ಯಾವ ರೀತಿ ಬೇಕಾದರೂ ಸ್ವೀಕಾರ ಮಾಡಬಹುದು. ಅದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ ಲಕ್ಷ ಜನ ಇರುವ ಸಂಸ್ಥೆಯಲ್ಲಿ 60-70 ಸಾವಿರ ಜನ ಕಾರ್ಮಿಕರು ಇರುವ ಸಂಸ್ಥೆಯಲ್ಲಿ ಕಾರ್ಮಿಕರನ್ನು ಬಿಟ್ಟು ಒಂದು ಸಂಸ್ಥೆಯನ್ನು ನಡೆಸುವುದು ಒಂದು ನೀತಿಯಾಗುವುದಲ್ಲ. ಆದ್ದರಿಂದ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತೊಂದು ಸಾರಿ ಎಲ್ಲರನ್ನೂ ಕರೆಯಿಸಿ ಕುಳಿತು ಮಾತನಾಡಿ ತಮ್ಮ ಒಂದು ತೀರ್ಪನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ತಮಗೆ ಹೇಳುತ್ತಿದ್ದೇನೆ. ಇದರ ಜೊತೆಗೆ ಮಾನ್ಯ ಅಧ್ಯಕ್ಷರ ತಾವು ನಾಲ್ಕು ಕಿಲೋ ಮೀಟರ್ ದಿನಾ ನಡೆಯಬೇಕು ಎಂದು ಒಬ್ಬನ ಬಗ್ಗೆ ಒಂದು ಕತೆಯನ್ನು ಹೇಳಿದಿರಿ. ಈಗ ನಮಗೆ ಏನಾಗಿದೆ ಎಂದರೆ ಧರಣಿ ಮಾಡಿದ್ದೇವೆ, ನಾವು ಒಪ್ಪಿಕೊಂಡಿದ್ದೇವೆ. ಒಂದು ಕಥೆ ಏನೆಂದರೆ ಇಬ್ಬರು ನಿಂತಿದ್ದರು. ಆ ಕಡೆಯಿಂದ ಒಬ್ಬ ಬಂದ. ಈ ಕಡೆಯಿಂದ ಒಬ್ಬ ಬಂದ. ಬಂದವನು ಕಾಲನ್ನು ತುಳಿದುಬಿಟ್ಟ. ಕಾಲು ತುಳಿದವನೇ ಕೂಗಿಕೊಳ್ಳುವುದು. ಹೋಯಿತು, ಹೋಯಿತು, ನನ್ನ ಕಾಲು ಹೋಯಿತು ಎಂದು. ತುಳಿಸಿಕೊಂಡವನು ಭಯ ಬಿದ್ದುಬಿಟ್ಟ. ಇದೆಲ್ಲಿ ಗ್ರಹಚಾರ , ಅವನೇ ಕೂಗಿಕೊಳ್ಳುತ್ತಿದ್ದಾನೆ, ನಾನೇಕೆ? ನೊಂದರೂ ಚಿಂತೆಯಿಲ್ಲ ಎಂದು ಸುಮ್ಮನಾದ. ಈ ಪರಿಸ್ಥಿತಿ ಇವತ್ತು ನಮಗೆ ಆಯಿತು. ಆದರೂ ಚಿಂತೆಯಿಲ್ಲ. ಆದರೂ ಒಂದು ಒಳ್ಳೆಯ ಹಿತದೃಷ್ಟಿಯಿಂದ ಈ ಒಂದು ಪರಿಸ್ಥಿತಿಯನ್ನು ತಿಳಿ ವಾತಾವರಣ ಮಾಡಿದ್ದೀರಿ. ಈ ಬಗ್ಗೆ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಆ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಈಗ ನಮ್ಮ ನಂಜೇಗೌಡರು ಹೇಳಿದರು, ಸಾರಿಗೆ ಸಚಿವರು ಮುಖ್ಯಮಂತ್ರಿಯಾಗಬೇಕು ಎಂದು. ನನಗೇನೂ ವಿರೋಧ ಇಲ್ಲ, ಆಗಲಿ. ಯಾರ್ಯಾರು ಆಗಬೇಕೊ ಆಗಲಿ. ಆದರೆ ತಮ್ಮಲ್ಲಿ ಮೊಂಡುತನ ಇಲ್ಲ, ಆದ್ದರಿಂದ ಸ್ವಲ್ಪ ದಿವಸ ನೀವೇ ಇರಿ. ಏಕೆಂದರೆ ಈಗ ತಕ್ಷಣಕ್ಕೆ ಯಾರೂ ಆಗುವ ಪ್ರಶ್ನೆ ಬೇಡ. ಆ ಪ್ರಶ್ನೆ ಈಗ ಬಂದಿಲ್ಲ.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು) : ನಮ್ಮಲ್ಲಿ ಮುಖ್ಯಮಂತ್ರಿಗಳಾಗುವುದಕ್ಕೆ ಯೋಗ್ಯತೆ ಇರುವವರು ಬಹಳ ಜನ ಇದ್ದಾರೆ. ಆದರೆ ಅಲ್ಲಿ ಇಲ್ಲ. ಅದಕ್ಕೆ ಒಂದು ರೀತಿ ಹೊಟ್ಟೆಕಿಚ್ಚು ತಡೆದುಕೊಳ್ಳಲಾರದೆ ನೀನಾಗು, ನೀನಾಗು ಎಂದು ಹೇಳುವುದು. ಈ ರಾಜ್ಯದ ಹಿತರಕ್ಷಣೆ ಮಾಡುವುದಕ್ಕೆ ಯಾರು ಶ್ರದ್ಧೆಯಿಂದ ದುಡಿಯುವುದಕ್ಕೆ ತಯಾರು ಇದ್ದಾರೋ ಅವರು ಆಗಲಿ.

ಶ್ರೀ ಹೆಚ್.ಎನ್. ನಂಜೇಗೌಡ : ಈಗ ಒಂದು ಕೆಲಸ ಮಾಡೋಣ ಈ ಕಡೆ ಮುಖ್ಯಮಂತ್ರಿಯಾಗುವುದಕ್ಕೆ ಅರ್ಹತೆ ಇರುವವರು ಕಡಿಮೆ ಇದ್ದಾರೆ. ಯಾರಾದರೂ ಒಬ್ಬರು ಬನ್ನಿರಪ್ಪಾ 40 ಜನ ಕರೆದುಕೊಂಡು ಮುಖ್ಯಮಂತ್ರಿ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ನಾವು ನಿಮ್ಮನ್ನು ತೆಗೆಯುವುದಕ್ಕೆ ತಯಾರಾಗಿಲ್ಲ. ಅದು ಸ್ಪಷ್ಟ. ಆದ್ದರಿಂದ ನಂಜೇಗೌಡರು ಏನೊ ಇಲ್ಲಿ ಎತ್ತಿಕಟ್ಟುತ್ತಿದ್ದಾರೆ. ನಾನು ಅದಕ್ಕೆ ಒಪ್ಪುವುದಿಲ್ಲ. ಸಿಂಧ್ಯಾರವರನ್ನು

ಎತ್ತಿ ಕಟ್ಟಿರುವುದು ಏನೊ ಗೋಪ್ಯ ಇದೆ. ನಾನು ಅದನ್ನು ಒಪ್ಪುವುದಿಲ್ಲ. ಏಕೆಂದರೆ ಇವತ್ತು ಸಿಂಧ್ಯಾರವರೇ ಮುಖ್ಯಮಂತ್ರಿಯಾಗಿದ್ದರೆ ಸ್ವಲ್ಪ ಹೆಚ್ಚು ಕಡಿಮೆ ಇದು ಬಗೆಹರಿಯುತ್ತಿರಲಿಲ್ಲ. ಅಂದರೆ ಅರ್ಥವೇನು ಎಂದರೆ, ನೀವು ಇದ್ದುದರಿಂದ ಬಗೆಹರಿಯಿತು ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳೋಣ. ಅದು ಪ್ರಾಮಾಣಿಕತೆ.

ಶ್ರೀ ಹೆಚ್.ಎನ್.ನಂಜೇಗೌಡ : ಮಾನ್ಯ ದೇವೇಗೌಡರು ಇದ್ದರೂ ಬಗೆಹರಿಯುತ್ತಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದೂ ನಿಜ. ಆದ್ದರಿಂದ ಈ ಬಗೆಹರಿದಿರತಕ್ಕಂಥದ್ದಕ್ಕೆ ತಾವೇ ಸುದೀರ್ಘವಾಗಿ ಇರಿ, ನಮ್ಮದೇನೂ ತಕರಾರು ಇಲ್ಲ. ತಾವು ದಯವಿಟ್ಟು ಇರಬೇಕು. ಅದರಲ್ಲೇನೂ ಅನುಮಾನವಿಲ್ಲ. ಆ ದೃಷ್ಟಿಯಿಂದ ತಮಗೆ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈ ಸಾರಿಗೆ ಸಂಸ್ಥೆಯ ಬಗ್ಗೆ ಸಮಗ್ರ ವ್ಯವಸ್ಥೆಯಾಗಬೇಕು. ನಾವೆಲ್ಲರೂ ಅದೇ ಹೇಳುತ್ತಿದ್ದೇವೆ. ಅಲ್ಲಿ ಭ್ರಷ್ಟಾಚಾರವನ್ನು ಸರಿಪಡಿಸುವುದು, ಕಾಲಕ್ಕೆ ತಕ್ಕಂತೆ ಬಸ್‌ಗಳು ಓಡತಕ್ಕಂಥದ್ದು. ಇವೆಲ್ಲವನ್ನೂ ಸರಿಪಡಿಸುವ ಒಂದು ವ್ಯವಸ್ಥೆ ಪ್ರಾಮಾಣಿಕವಾಗಿ ಆಗಬೇಕಾಗಿದೆ. ಆ ಕೆಲಸವನ್ನು ತಾವು ಮಾಡಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತೇವೆ. ಇದಕ್ಕಾಗಲೇ ಮಾನ್ಯ ವಿರೋಧ ಪಕ್ಷದನಾಯಕರು ಸಲಹೆಯನ್ನು ಕೊಟ್ಟರು. ಬೇಕಾದರೆ ಒಂದು ಸಮಿತಿಯನ್ನು ರಚನೆ ಮಾಡಿ, ಈ ಸಮಿತಿ ಕಾಲಕಾಲಕ್ಕೆ ತಮಗೆ ಸಲಹೆಯನ್ನು ಬೇಕಾದರೂ ಕೊಡುತ್ತದೆ ಎಂದು ತಾವು ಹೇಗೆ ಬೇಕಾದರೂ ತೀರ್ಮಾನ ಮಾಡಿ. ಒಟ್ಟಿನಲ್ಲಿ ಆ ಸಂಸ್ಥೆ ಉಳಿಯುವ ಒಂದು ವ್ಯವಸ್ಥೆಯಾಗಬೇಕಾದುದು ಕರ್ತವ್ಯ. ಆದರೂ ಇವತ್ತು ದರ ಜಾಸ್ತಿ ಮಾಡಿ ಯಾವುದೋ ಒಂದು ಹಂತದಲ್ಲಿ ತಾವು ಕಡಿಮೆ ಮಾಡಿದ್ದೀರಿ. ಅದಕ್ಕಾಗಿ ನಿಮಗೆ ಅಭಿನಂದಿಸಿ ಇದನ್ನು ಸ್ವಾಗತ ಮಾಡಿ ನಮ್ಮ ಧರಣಿಯನ್ನು ಹಿಂತೆಗೆದುಕೊಂಡಿದ್ದೇವೆ ಎನ್ನುವ ಮಾತನ್ನು ತಮಗೆ ಹೇಳುತ್ತಿದ್ದೇನೆ.

6.00 ಪಿ.ಎಂ

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಇವತ್ತು ನಿನ್ನೆಯಿಂದ ನಡೆದಂತಹ ಧರಣಿ, ಸರ್ಕಾರದ ಜೊತೆ ಒಂದು ಪ್ರಸ್ತಾಪ, ಎಲ್ಲವೂ ಕೂಡ ಸುಖಾಂತವಾಗಿ ಆಗಿದೆ. ನಾನು ಮಾನ್ಯ ಸಿಂಧ್ಯಾರವರ ಜೊತೆ ಒಂದು ಹದಿನೈದು ದಿವಸಗಳ ಹಿಂದೆ ಮಾತನಾಡುವಾಗ ಹೇಳಿದ್ದೆ. ನೋಡಿ ದರವನ್ನು ಹೆಚ್ಚು ಮಾಡುವುದಕ್ಕೆ ಮೂಲಭೂತವಾಗಿ ಯಾರದೂ ವಿರೋಧವಿಲ್ಲ. ಆದರೆ ಹೆಚ್ಚಿಸಿರತಕ್ಕ ಪ್ರಮಾಣ ಜಾಸ್ತಿಯಾಯಿತು. ಅದು ರಾಜಕೀಯವಾಗಿ ನಿಮಗೂ ತೊಂದರೆ ಆಗುತ್ತದೆ, ಜನರಿಗೂ ತೊಂದರೆ ಆಗುತ್ತದೆ. ನೀವು ಅದನ್ನು ಪರಿಗಣನೆ ಮಾಡಿ ಎಂದು ನಾನು ವೈಯಕ್ತಿಕವಾಗಿ ಸಿಂಧ್ಯಾರವರ ಜೊತೆ ಮಾತನಾಡತಕ್ಕ ಸಂದರ್ಭದಲ್ಲಿ ಬಹಳ ಕಳಕಳಿಯಿಂದ ಒತ್ತಾಯ ಮಾಡಿದ್ದೆ. ಬಹುಶಃ ಆವತ್ತು ಮಾತನಾಡಿದಂತಹ ಸಂದರ್ಭದಲ್ಲಿ ನನಗೆ ಅನಿಸಿತ್ತು. ಸಿಂಧ್ಯಾರವರಿಗೂ ಅದು ನಿಜ ಎಂದು ಅನಿಸಿದೆ, ಏನೋ ಒಂದು ಮಾಡುತ್ತಾರೆಂದೂ ಅನಿಸಿತ್ತು. ಆದರೆ ಏಕಾಏಕಿ ಅವರು ಹೀಗೆ ಮಾಡುತ್ತಾರೆ ಎಂದು ಗೊತ್ತಿರಲಿಲ್ಲ. ಹಾಗಾಗಿ ಇವತ್ತು ಪರಿಸ್ಥಿತಿ ಹದಗೆಟ್ಟಿದೆ ನಿಜ. ಕೆಎಸ್‌ಆರ್‌ಟಿಸಿ ಪರಿಸ್ಥಿತಿ ಹದಗೆಟ್ಟಿದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಅದನ್ನು ಬದುಕಿಸಬೇಕಾಗಿದೆ. ರೋಗ

ಬಂದಿದೆ. ಆದರೆ ರೋಗ ಬಂದಿರತಕ್ಕಂಥ ರೋಗಿಯನ್ನು ಬದುಕಿಸಲಿಕ್ಕೆ ಪ್ರಯತ್ನ ಮಾಡಿ. ಅದಕ್ಕೆ ನಮ್ಮ ಸಹಕಾರ ಇದೆ. ಆದರೆ ಅದನ್ನು ಸಾಯಿಸಲಿಕ್ಕೆ ದಯವಿಟ್ಟು ಯಾವುದೇ ರೀತಿ ಪ್ರಯತ್ನ ಮಾಡಬೇಡಿ ಎಂದು ಹೇಳಿ ಮತ್ತೊಮ್ಮೆ ಕಳಕಳಿಯಿಂದ ವಿನಂತಿ ಮಾಡುತ್ತಿದ್ದೇನೆ. ಏಕೆಂದರೆ, ನಮ್ಮ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಇಡೀ ದೇಶದಲ್ಲಿ ಒಂದು ಕಾಲದಲ್ಲಿ ಒಳ್ಳೆಯ ಹೆಸರಿತ್ತು. ಈಗ ಮಾನ್ಯ ಸಿಂಧ್ಯಾ ಅವರು ಮಂತ್ರಿಗಳಾಗಿದ್ದಾರೆ. ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕವರು. ಕೆಎಸ್ಆರ್‌ಟಿಸಿ ಬಗ್ಗೆ ಬಹಳ ಆಳವಾಗಿ ಅಭ್ಯಾಸ ಮಾಡಿರತಕ್ಕವರು ಮತ್ತು ಅವರಿಗೆ ಕಳಕಳಿ ಕೂಡ ಇದೆ. ಕಳಕಳಿ ಇಲ್ಲ ಎಂದು ನಾನು ಖಂಡಿತವಾಗಿ ಸಿಂಧ್ಯಾರವರ ಬಗ್ಗೆ ಹೇಳುವುದಿಲ್ಲ. ಅವರಿಗ ಅದರ ಬಗ್ಗೆ ಕಳಕಳಿ ಇದೆ. ಆದರೆ ಏಕೋ ಕೆಲವು ಒತ್ತಡಗಳಿಂದ ಬಹುಶಃ ಅವರು ಕೆಲವು ಕಠಿಣವಾದಂತಹ ತೀರ್ಮಾನಗಳನ್ನು ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಅದು ಸಾರ್ವಜನಿಕರಿಗೆ ತೊಂದರೆ ಆಗುತ್ತದೆ. ರಾಜಕೀಯವಾಗಿ ನಿಮಗೆ ತೊಂದರೆ ಆಗುತ್ತದೆ. ಅದನ್ನು ದಯವಿಟ್ಟು ಆಲೋಚನೆ ಮಾಡಿ. ರಾಜಕೀಯ ಪ್ರಶ್ನೆ ಇದೆ. ಏಕೆಂದು ಹೇಳಿದರೆ ಮೂರು ವರ್ಷಗಳಿಂದ ಏರಿಕೆ ಮಾಡಲಿಲ್ಲ. ಅದೂ ರಾಜಕೀಯ ಕಾರಣ. ಹಾಗಾಗಿ ನೀವು ದಯವಿಟ್ಟು ಅದನ್ನು ಪರಿಗಣಿಸಬೇಕು. ನೀವು ಎಲ್ಲವನ್ನೂ ಆಲೋಚನೆ ಮಾಡಿ. ಮತ್ತೆ ಅದರಲ್ಲಿ ನಡೆಯುತ್ತಿರತಕ್ಕ ಅವ್ಯವಹಾರಗಳನ್ನು ತಡೆದರೆ ಖಂಡಿತ ದರಗಳನ್ನು ಹೆಚ್ಚು ಮಾಡಲೇಬೇಕು ಎನ್ನತಕ್ಕ ಪರಿಸ್ಥಿತಿ ಬರುವುದಿಲ್ಲ. ಆ ಅವ್ಯವಹಾರಗಳನ್ನು ತಡೆಯಲಿಕ್ಕೆ ನಮ್ಮಿಂದ ಏನು ಸಹಕಾರ ಬೇಕು ಎಂದು ನೀವು ಕೇಳುತ್ತೀರಿ ಅದನ್ನು ನಾವು ಖಂಡಿತ ಕೊಡಲಿಕ್ಕೆ ತಯಾರಿದ್ದೇವೆ. ಆದರಲ್ಲಿ ನಡೆಯುತ್ತಿರತಕ್ಕ ಅವ್ಯವಹಾರಗಳನ್ನು ತಡೆಯಲಿಕ್ಕೆ ಅಥವಾ ಸಲಹೆ ಸೂಚನೆಗಳನ್ನು ಕೊಡಲಿಕ್ಕೆ ನಾವು ತಯಾರಿದ್ದೇವೆ. ನಾನು ಸರ್ಕಾರವನ್ನು ಅಭಿನಂದನೆ ಮಾಡುತ್ತಿದ್ದೇನೆ. ಏಕೆಂದು ಹೇಳಿದರೆ ಯಾವುದೇ ಪ್ರತಿಷ್ಠೆಯ ಪ್ರಶ್ನೆ ಮಾಡಿಕೊಳ್ಳದೇ ಬಿಚ್ಚು ಮನಸ್ಸಿನಿಂದ, ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಬಹಳ ಕಾಳಜಿ ವಹಿಸಿ ರಾತ್ರಿ ಹತ್ತು ಗಂಟೆಯಲ್ಲಿ ಬಂದು, ಇವತ್ತ ಬೆಳಿಗ್ಗೆ ಹತ್ತು ಗಂಟೆಯಿಂದ ಸಂಜೆ ಮೂರು ಗಂಟೆಯವರೆಗೆ ಬಹಳ ಪ್ರಾಮಾಣಿಕವಾಗಿ ಬಿಚ್ಚು ಮನಸ್ಸಿನಿಂದ ಚರ್ಚೆ ಮಾಡಿದ್ದಾರೆ. ಹಾಗೆಯೇ ಮಾನ್ಯ ಪ್ರಕಾಶ್ ಅವರು ನಮ್ಮ ಜೊತೆ ನಿನ್ನೆಯೇ ಬಂದು ಮಾತನಾಡಿ ಬಹಳ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದಾರೆ. ಈ ಸಮಸ್ಯೆಯನ್ನು ಪರಿಹಾರ ಮಾಡಬೇಕು ಎಂದು ಪ್ರಯತ್ನ ಮಾಡಿದ್ದಾರೆ. ನಾನು ಅವರಿಗೂ ಕೂಡ ಅಭಿನಂದಿಸುತ್ತೇನೆ. ನಮ್ಮ ಎಲ್ಲ ವಿರೋಧ ಪಕ್ಷದ ಮುಖಂಡರುಗಳು ಈ ಬಗ್ಗೆ ಒಮ್ಮತ ಅಭಿಪ್ರಾಯದಿಂದ ವಿಶೇಷವಾಗಿ ನಮ್ಮ ಹಿರಿಯ ಸದಸ್ಯರಾದಂತಹ ಶ್ರೀಮಾನ್ ನಂಜೇಗೌಡರು, ನಮ್ಮ ವಾಟಾಳ್ ನಾಗರಾಜ್ ಅವರ ಬಹಳ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದಾರೆ. ಅವರಿಗೂ ಕೂಡ ವಂದಿಸುತ್ತೇನೆ. ಆದರೆ ನನಗೆ ಒಂದು ನೋವಿನ ಸಂಗತಿ ಇದೆ. ಏನೆಂದರೆ ನಾವು ಧರಣಿ ಮಾಡಿದರೆ, ಧರಣಿ ಮಾಡಿ ಶಾಸಕರು ಊಟ ಮಾಡಿ ಮನೆಗೆ ಹೋದರು ಎಂದು ಹೇಳಿ ಪತ್ರಿಕೆಯಲ್ಲಿ ಓದಿದ್ದು ನಮಗೆ ಬಹಳ ನೋವಾಗಿದೆ. ಅಧ್ಯಕ್ಷರು ಬಹಳ ಕಾಳಜಿ ವಹಿಸಿ ನಮಗೆ ಎಲ್ಲಾ ವ್ಯವಸ್ಥೆ ಮಾಡಿ ಲೆಜಿಸ್ಲೇಚರ್ ಎಕ್ಸಪಂಡಿಚರ್‌ನಿಂದ ಊಟ ತರಿಸಿಕೊಟ್ಟರೆ, ಎಕ್ಸೈಜ್ ಕಂಟ್ರಾಕ್ಟರ್ ಊಟ ಕೊಡಿಸಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಇನ್ನು ಮೇಲೆ ಶಾಸಕರು ಊಟ ಮಾಡಿದರೆ ಕೂಡ ತಪ್ಪಾಗುತ್ತದೆನೋ ಎನ್ನತಕ್ಕ ಭಯ ನಮಗೆ ಬಂದಿದೆ. ಆದ್ದರಿಂದ ಅಧ್ಯಕ್ಷರು ಎಷ್ಟು

ಶ್ರಮ ತೆಗೆದುಕೊಂಡಿದ್ದಾರೆ, ಅವರು ಹತ್ತು ಗಂಟೆಯವರೆಗೆ ಇಲ್ಲಿ ಇದ್ದು, ಊಟ ತರಿಸಿ ಅವರೇ ಸ್ವತಃ ನಿಂತು, ಎಲ್ಲಾ ಶಾಸಕರುಗಳಿಗೆ ಸಿಬ್ಬಂದಿಯವರಿಗೆ, ಪತ್ರಕರ್ತರಿಗೂ ಕೂಡ ಊಟ ಹಾಕಿಸಿದ್ದಾರೆ. ಕಡೆಗೆ ಅವರು ಮನೆಗೆ ಹೋದರು. ಅವರು ಅಷ್ಟೆಲ್ಲಾ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದರೆ ಈ ರೀತಿ ಪತ್ರಿಕೆಯಲ್ಲಿ ಬರೆದಿದ್ದಾರೆ. ಈ ವಿಷಯದಲ್ಲಿ ನನ್ನ ಮನಸ್ಸಿಗೆ ನೋವಾಗಿದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

+ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ರಕ್ತ ಕೊಡುವ ವಿಷಯ ಹೇಳಿದರು. ಆದರೆ ಅನಿಮಿಕ ಪೇಷಂಟ್‌ಗೆ ಎಷ್ಟು ರಕ್ತ ಕೊಡಿಸಿದರೂ ಯಾವುದೇ ಕಾರಣಕ್ಕೋ ಆ ಪೇಷಂಟ್‌ಗೆ ರೋಗವಾಸಿ ಆಗುವುದಿಲ್ಲ. ಹೊಟ್ಟೆಯಲ್ಲಿರುವ ಹುಳ ಸಾಯಿಸುವುದಕ್ಕೆ ಏನಾದರೂ ಯೋಚನೆ ಮಾಡಿದರೆ, ಅಲ್ಪಸ್ವಲ್ಪ ರಕ್ತ ಕೊಟ್ಟರೆ ಸಾಕು. ಆವಾಗ ಏನಾದರೂ ಆ ಪೇಷಂಟ್ ಹುಷಾರಾಗಲು ಸಾಧ್ಯ. ಆ ದಿಕ್ಕಿನಲ್ಲಿ ಮಾನ್ಯ ಸಿಂಧ್ಯಾರವರು ಕೆಲಸ ಮಾಡಬೇಕು. ಇಲ್ಲದೇ ಇದ್ದರೆ ಅಕೌಂಟ್‌ಬಲಿಟಿ ಫಿಕ್ಸ್ ಮಾಡಿ. ಜವಾಬ್ದಾರಿಯುತವಾಗಿ ಸಾರಿಗೆ ಸಂಸ್ಥೆ ನಡೆಯದೇ ಇದ್ದರೆ ಇದೇ ರಕ್ತ ಕೊಡುವ ಕೆಲಸ ನಿರಂತರವಾಗಿ ನಡೆಯುತ್ತಿರುತ್ತದೆ. ಇದೇ ರೀತಿ ಧರಣಿ ಆಗುತ್ತಿರುತ್ತದೆ. ಅಲ್ಪಸಲ್ಪ ಮಾತುಕತೆ ಮೂಲಕ ಬಗೆಹರಿಸಿಕೊಳ್ಳತಕ್ಕ ಪರಿಸ್ಥಿತಿಗೆ ಹೋಗುತ್ತದೆ. ದಯವಿಟ್ಟು ಜವಾಬ್ದಾರಿಯುತವಾಗಿ ಅಕೌಂಟ್‌ಬಲಿಟಿ ಫಿಕ್ಸ್ ಮಾಡಿ ಹೊಣೆಗಾರಿಕೆ ನಿರ್ವಹಣೆ ಮಾಡಿದರೆ ಮಾತ್ರ ಸಾಧ್ಯ. ಬಹಳ ಕಳಕಳಿ ಇಟ್ಟು ಪ್ರತಿ ಬಸ್ ಸ್ಟ್ಯಾಂಡಿನಲ್ಲಿ ನಡೆಯತಕ್ಕ ವಿಚಾರವನ್ನು ಸಂಗ್ರಹಣೆ ಮಾಡಿ ತಾವೇನಾದರೂ ಬದಲಾವಣೆ ಮಾಡಬೇಕು. ನಾನು, ನಿನ್ನೆ ಒಂದು ಉದಾಹರಣೆ ಕೊಟ್ಟಿದ್ದೇನೆ. ಮೂರು ಜನ ಒಂದು ದೊಡ್ಡ ಬಸ್‌ನಲ್ಲಿ ಬೆಂಗಳೂರಿಗೆ ಬಂದೆವು ಅಂದರೆ ಎಷ್ಟರಮಟ್ಟಿಗೆ ಸರ್ಕಾರಕ್ಕೆ ನಷ್ಟ ಆಗುತ್ತದೆ ಎಂದು ತಾವು ಗಂಭೀರವಾಗಿ ಯೋಚನೆ ಮಾಡಬೇಕು. ಅಂತಹವನ್ನು ಕ್ಯಾನ್ಸಲ್ ಮಾಡಿ ಉಳಿಸುವಂತಹ ವ್ಯವಸ್ಥೆ ಮಾಡಿ. ಲಕ್ಷುರಿ ಬಸ್‌ನಲ್ಲಿ ಮೂರು ಜನ ಮೈಸೂರಿನಿಂದ ಬೆಂಗಳೂರಿಗೆ ಬಂದರೆ ಎಷ್ಟರಮಟ್ಟಿಗೆ ನಷ್ಟ ಆಗಬಹುದು ಎನ್ನುವುದನ್ನು ತಾವು ದಯವಿಟ್ಟು ಯೋಚನೆ ಮಾಡಬೇಕು. ಅಂತಹವು ಯಾವುದಾದರೂ ಇದ್ದರೆ ರೆಸ್ಪಾನ್ಸಿಬಿಲಿಟಿ ಮೂಲಕ ಅಂತಹ ಬಸ್‌ಗಳನ್ನು ನಿಲ್ಲಿಸುವ ಬಗ್ಗೆ ತಾವು ದಯವಿಟ್ಟು ಯೋಚನೆ ಮಾಡಿ. ತಮ್ಮ ಸಾರಿಗೆ ವ್ಯವಸ್ಥೆಯನ್ನು ಬಹಳ ನೋವಿನಲ್ಲಿರತಕ್ಕ ಗ್ರಾಮೀಣ ಜನತೆಗೆ ಒದಗಿಸತಕ್ಕ ದಿಕ್ಕಿನಲ್ಲಿ ತಾವು ಕೆಲಸ ಮಾಡಬೇಕೆಂದು ಹೇಳಿ ಈ ವಿಷಯದಲ್ಲಿ ಸರ್ಕಾರ ಮತ್ತು ಹಿರಿಯ ಸದಸ್ಯರೆಲ್ಲರೂ ಪ್ರಯತ್ನ ಮಾಡಿ ಈ ಸಮಸ್ಯೆಯನ್ನು ಸುಖಾಂತದಲ್ಲಿ ಮುಗಿಸಿದ್ದೀರಿ ಎಲ್ಲರಿಗೂ ಧನ್ಯವಾದಗಳನ್ನು ಹೇಳುತ್ತಾ, ಅಧ್ಯಕ್ಷರಿಗೂ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಅಧ್ಯಕ್ಷರೆ, ತುಂಬಾ ಸಂತೋಷ. ವಿರೋಧ ಪಕ್ಷದವರು ಪ್ರಾರಂಭ ಮಾಡಿರತಕ್ಕ ಹೋರಾಟ ಯಶಸ್ವಿಯಾಗಿ ಮುಕ್ತಾಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ನಾವು ಚರ್ಚೆಗೆ ಹೋದಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದರು. ನಾವು ರಿಯಾಯಿತಿಯನ್ನು ನೀಡುವುದು ಜನರಿಗೋಸ್ಕರ. ಆದ್ದರಿಂದ ಇಲ್ಲಿ ಪ್ರತಿಷ್ಠೆ ಮಾಡಿಕೊಳ್ಳತಕ್ಕ

ಪ್ರಶ್ನೆ ಏನೂ ಇಲ್ಲ. ಮುಕ್ತ ಮನಸ್ಸಿನಿಂದ ಚರ್ಚೆ ಮಾಡೋಣ. ಸರ್ಕಾರದ ಇತಿಮಿತಿಗಳಲ್ಲಿ ಜನರಿಗೆ ಎಷ್ಟು ಸಹಾಯ ಮಾಡಬೇಕೋ ನಾವು ನೀವು ಸೇರಿಯೇ ಮಾಡೋಣ ಎಂಬ ಮಾತನ್ನು ಹೇಳಿರುವ ಕಾರಣಕ್ಕಾಗಿ ಇವತ್ತು ತುಂಬಾ ಯಶಸ್ವಿಯಾಗಿ, ಸಮಾಧಾನಕರವಾಗಿ ಕೆಲಸ ಆಗಿದೆ. ಆ ಕಾರಣಕ್ಕಾಗಿ ನಾವು ಅವರಿಗೆ ಆ ಸಂದರ್ಭದಲ್ಲಿ ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ಮೇಲಾಗಿ ತಮಗೆ ಬಿಕ್ಕಿಟ್ಟಿನ ಪರಿಸ್ಥಿತಿ ತಂದಿಟ್ಟವೋ ಏನೋ ಎನ್ನತಕ್ಕ ಮಾನಸಿಕ ವೇದನೆ ಕೂಡ ನನಗೆ ಇದೆ. ಆದರೆ ಪ್ರಾರಂಭದ ಹಂತದಲ್ಲಿ ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳತಕ್ಕಂಥ ಪ್ರಯತ್ನ ನಾವಂತೂ ಮಾಡಿದ್ದೇವೆ. ಮಾನ್ಯ ವಾಟಾಳ್ ನಾಗರಾಜ್ ಅವರೂ ಮಾಡಿದ್ದಾರೆ. ವ್ಯವಧಾನಿಕವಾಗಿ ಏನಾದರೂ ಆ ರೀತಿ ಅನಿಸಿದರೆ ಅನ್ಯಥಾ ಭಾವಿಸಬಾರದು. ಏಕೆಂದರೆ ಮಾನ್ಯ ಸಂಜೇಗೌಡರು ಪ್ರಸ್ತಾಪ ಮಾಡಿದ ಮೇಲೆ ವ್ಯವಧಾನಿಕವಾಗಿ ಅಂತಹ ಏನಾದರೂ ಸಂಸದೀಯ ವ್ಯವಹಾರ ಅಲ್ಲದೇ ಇರತಕ್ಕ ರೀತಿಯಲ್ಲಿ ನಡೆದಿದ್ದರೆ ಆ ತಪ್ಪಿಗೆ ನಾವೆಲ್ಲರೂ ಜವಾಬ್ದಾರರು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ತಾವು ತೋರಿದಂತಹ ಜವಾಬ್ದಾರಿ, ವಿಶ್ವಾಸ ನಮ್ಮೆಲ್ಲರಿಗೂ ಮೆಚ್ಚಿಗೆ ಆಗಿದೆ. ತಮಗೆ ನಾನು ವಿಶೇಷವಾಗಿ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ರಕ್ತ ಕೊಡುವುದೋ ಅಥವಾ ಹುಳ ತೆಗೆಯುವುದೋ ಅದು ಒಂದು ದೊಡ್ಡ ಸಮಸ್ಯೆ ಇದೆ. ಇವತ್ತು ಕಾರ್ಮಿಕರ ಚಳುವಳಿ ಯಾವ ದಿಕ್ಕು ಹಿಡಿದಿವೆ? ಹೋರಾಟಗಳು ಯಾವ ದಿಕ್ಕು ಹಿಡಿದಿವೆ ಎನ್ನುವುದನ್ನು ನೆನೆಸಿಕೊಳ್ಳುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಅದಕ್ಕೆ ಅನೇಕ ಸಂದರ್ಭದಲ್ಲಿ ನಾವೇ ಕಾರಣೀಭೂತರಾಗಿದ್ದೇವೆ. ಈ ಸಂಸ್ಥೆಯ ರೋಗ ತೆಗೆಯುವುದು ಅಷ್ಟು ಸುಲಭ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಭ್ರಮೆ ಮಾತ್ರ. ಸಂಸ್ಥೆಯನ್ನು ಹುಟ್ಟಿ ಹಾಕಿದವನನ್ನೇ ಭಕ್ಷಣೆ ಮಾಡತಕ್ಕಂಥ ಸನ್ನಿವೇಶಗಳೂ ಉಂಟು. ಮಾಡುವುದಕ್ಕೆ ಸಾಧ್ಯತೆ ಇದೆ. ಕಾರ್ಮಿಕರು ಎಂದರೆ ದುಡಿಯತಕ್ಕವರು. ಮಾರ್ಕ್ಸ್‌ನ ಸಿದ್ಧಾಂತದಲ್ಲಿ ಕಾರ್ಮಿಕ, ಬಂಡವಾಳ, ಭೂಮಿಯೇ ಉತ್ಪಾದನೆಯ ಸಂಕೇತಗಳು. ಅವನ್ನು ಬಿಟ್ಟರೆ ಉತ್ಪಾದನೆ ಆಗುವುದಕ್ಕೆ ಸಾಧ್ಯ ಇಲ್ಲ. ಅವುಗಳನ್ನು ಬಳಸಿಕೊಳ್ಳತಕ್ಕ ರೀತಿಯೂ ಕೂಡ ಅಷ್ಟೇ ಚೆನ್ನಾಗಿದೆ. ಆದರೆ ಬೆಳೆಸತಕ್ಕ ಸನ್ನಿವೇಶದಲ್ಲಿ ಅಡ್ಡ ದಾರಿ ಹಿಡಿದು ಅನೇಕ ತಪ್ಪಿಗೆ ಕಾರಣ ಆಗಿವೆ. ಆದ್ದರಿಂದ ನಾವೆಲ್ಲಾ ಶಾಸಕರು ಯಾವುದೇ ಕಾರ್ಮಿಕನ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡರೆ ನಾವು ಪ್ರವೇಶ ಮಾಡುವುದಿಲ್ಲ. ಎನ್ನತಕ್ಕ ಒಂದು ಪ್ರತಿಜ್ಞೆ ಮಾಡಿದರೆ ಸ್ವಲ್ಪ ಮಟ್ಟಿಗೆ ಹತೋಟಿಗೆ ತರುವುದಕ್ಕೆ ಸಾಧ್ಯ ಇದೆ. ಒಂದು ಉದಾಹರಣೆ ಹೇಳುತ್ತೇನೆ, ನಮ್ಮ ಊರಿನಲ್ಲೊಬ್ಬ ಕಂಡಕ್ಟರ್ ಸಸ್ಪೆಂಡಾಗಿದ್ದ, ಅವನು ನನ್ನ ಹತ್ತಿರ ಒಂದು ರಿಇನ್‌ಸ್ಟೇಟ್ ಮಾಡಿಸಿ ಕೊಡಿ ಎಂದು ಕೇಳಿದಾಗ ನಾನು ಆಗುವುದಿಲ್ಲವೆಂದು ಹೇಳಿಕಳಿಸಿದೆ. ಆದರೆ ಅವನು ಇನ್ನೊಬ್ಬ ಶಾಸಕರ ಹತ್ತಿರ ಹೋಗಿ ರಿಇನ್‌ಸ್ಟೇಟ್ ಮಾಡಿಸಿಕೊಂಡುಬಂದ. ಮುಂದೆ ಚುನಾವಣೆ ಬಂದಾಗ ವೋಟು ಕೇಳುವುದಕ್ಕೆ ನಾನು ಆ ಏರಿಯಾಕ್ಕೆ ಹೋದಾಗ ಮುಂದೆ ಬಂದ ಅವನು ನಿನಗೆ ವೋಟ್ ಬೇಕಾ ಎಂದು ಕೇಳಿದ್ದನ್ನು ನೆನೆಸಿಕೊಂಡರೆ.....

+ ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ ತಿಮ್ಮಪ್ಪನವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ವ್ಯವಸ್ಥೆಯನ್ನು ಸಂಸ್ಥೆಯನ್ನು ಸರಿಮಾಡಬೇಕಾದರೆ ನಾವೆಲ್ಲರೂ ಪ್ರಾಮಾಣಿಕವಾಗಿ ದುಡಿಯಬೇಕಾಗುತ್ತದೆ. ಆದರೆ ಇಲ್ಲಿ ನಡೆಯುವ ಚರ್ಚೆ ಬೇರೆ ಕಡೆ ಹೋಗಿ ಬೇರೆ ಅರ್ಥ

ಕೊಡುವಂತಾಗಬಾರದೆಂದು ನಾನು ಹೇಳಬಯಸುತ್ತೇನೆ. ಕಳೆದ 6 ತಿಂಗಳಲ್ಲಿ ನಾನು ಸಾರಿಗೆ ಸಚಿವನಾದ ಮೇಲೆ ಯಾವುದೇ ಪಕ್ಷದ ಶಾಸಕರೂ ನನ್ನ ಮೇಲೆ ಒತ್ತಡ ತಂದಿಲ್ಲ. ಸಾಮಾನ್ಯವಾಗಿ ಆಡಳಿತ ಪಕ್ಷದ ಶಾಸಕರು ಹೆಚ್ಚು ಒತ್ತಡ ಇರುತ್ತದೆ, ಅವರಾಗಲಿ ಮಂತ್ರಿಗಳಾಗಲಿ ಇಂತಹ ಒತ್ತಡ ತಂದಿಲ್ಲ, ಈ ಸದನದಲ್ಲಿ ಸೌಹಾರ್ದಯುತ ವಾತಾವಾರಣ ಇರಬೇಕು ರಾಜ್ಯದ ಒಂದು ಪ್ರತಿಷ್ಠಿತ ಸಂಸ್ಥೆ ಇದು, ಇದನ್ನು ಉಳಿಸಿ ಬೆಳೆಸಿಕೊಳ್ಳಬೇಕೆಂದು ನಮ್ಮ ಮುಖ್ಯಮಂತ್ರಿಗಳು, ನಾವು ಇವತ್ತು ಬೆಳಿಗ್ಗೆ ಜನತಾದಳ ಶಾಸಕಾಂಗ ಸಭೆಯಲ್ಲೂ ಚರ್ಚೆ ಮಾಡಿದ್ದೇವೆ. ಈ ಸಮಯದಲ್ಲಿ ಒಂದು ವಿಚಾರವನ್ನು ನಾನು ಬಯಸುವುದು, ಕೆಲವು ಹಿರಿಯ ಸದಸ್ಯರು ಇದರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಸಾರಿಗೆ ವಿಷಯ ಸಮಿತಿಯವರಲ್ಲಿ ವಿಶೇಷವಾಗಿ ವಿನಂತಿಮಾಡಿಕೊಳ್ಳುತ್ತೇನೆ. ರಾಜಕೀಯವಾಗಿ ಯಾರ ಇಂಟರ್‌ಫಿಯರೆನ್ಸೂ ಇಲ್ಲ, ಅಲ್ಲಿ ವರ್ಕರ್ಸ್ ಬಹಳ ಒಳ್ಳೆಯವರು ಎಂದು ಪ್ರಾಮಾಣಿಕವಾಗಿ ಹೇಳುತ್ತೇನೆ. ಬೇರೆ ರಾಜ್ಯಗಳಲ್ಲಿ ವರ್ಕರ್ಸ ಹೇಗಿದ್ದಾರೆಂದು ನಾವು ಹೋಗಿ ನೋಡಿ ಬಂದಿದ್ದೇವೆ. ಆಲ್ ಇಂಡಿಯಾ ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಂಡರ್‌ಟೇಕಿಂಗ್ಸ್ ಒಂದು ಸಮ್ಮೇಳನ ಆಯಿತು, ಅದನ್ನು ಮಾನ್ಯ ಮುಖ್ಯಮಂತ್ರಿಗಳೇ ಉದ್ಘಾಟಿಸಿದರು. ರೂರಲ್ ಸರ್ವಿಸ್‌ನಲ್ಲಿ ಇಡೀ ರಾಷ್ಟ್ರದಲ್ಲೇ ಆಕ್ಸಿಡೆಂಟ್ಸ್ ಕಡಿಮೆ ಆಗಿರುವುದು ಅಂದರೆ ಕೆಎಸ್‌ಆರ್‌ಟಿಸಿಯಲ್ಲಿ, ಅದಕ್ಕಾಗಿ ನಮ್ಮ ಸಂಸ್ಥೆಗೆ ಮುಖ್ಯಮಂತ್ರಿಗಳೇ ಬಹುಮಾನವನ್ನೂ ಕೊಟ್ಟಿದ್ದಾರೆ. ಆದ್ದರಿಂದ ಕಾರ್ಮಿಕರನ್ನು ಮುಖ್ಯಮಂತ್ರಿಗಳಾಗಲಿ ಸಚಿವರಾಗಲಿ, ಯಾರೇ ಆಗಲಿ ದೂಷಣೆ ಮಾಡಿಲ್ಲ. ಆದರೆ ಅಲ್ಲಿನ ಕಾರ್ಮಿಕ ಸಂಘಗಳ ಕೆಲವು ಮುಖಂಡರ ಜೊತೆ ಸಂಘರ್ಷ ಮಾಡಬೇಕೆಂದು ಈ ಸರ್ಕಾರಕ್ಕಿಲ್ಲ. ಅಧ್ಯಕ್ಷರ ಮೂಲಕ ನಾನು ಶಾಸಕರಿಗೆ ತಿಳಿಸುತ್ತೇನೆ, ಅವರು ಬಳಸುವ ಭಾಷೆ, ವೀಡಿಯೊಕ್ಯಾಸೆಟ್ಸ್ ಮಾಡಿದ್ದೇವೆ. ನನ್ನ ಮೇಲೇನಾದರೂ ಸ್ವಲ್ಪ ಪ್ರೀತಿವಿಶ್ವಾಸ ಎನ್ನುವುದಿದ್ದರೆ ನಾನು ಸತ್ತಮೇಲೆ ಈ ಸದನದಲ್ಲಿ ಸಿಂಧ್ಯಾ ಅವರು ಹಾಗಿದ್ದರು ಹೀಗಿದ್ದರು ಎಂದು ಹೇಳುವುದರ ಬದಲಾಗಿ ನಾನು ಜೀವಂತವಾಗಿರುವಾಗ, ಪ್ರಾಮಾಣಿಕವಾಗಿ ದುಡಿಯುತ್ತಿರುವಾಗ ನನ್ನ ಮಕ್ಕಳು ಹೆಂಡತಿ ತಾಯಿ ಬಗ್ಗೆ ಯಾವರೀತಿ ವರ್ತನೆ ಮಾಡಿದ್ದಾರೆಂಬುದನ್ನು ನೋಡುವ ಸೌಜನ್ಯವನ್ನು ಕರುಣೆಯನ್ನು ಕೊನೇಪಕ್ಷ ನನ್ನ ಮೇಲೆ ವಿಶ್ವಾಸ ಇರುವವರು ತೋರಿಸಬೇಕು. ನಾನು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ : I have done my best to improve this organisation. I never wanted to revise the faires. ಮಾನ್ಯ ಮುಖ್ಯಮಂತ್ರಿಗಳಲ್ಲಿ, ಉಪಮುಖ್ಯ ಮಂತ್ರಿಗಳಲ್ಲಿ ನಾನು ಹೋಗಿ ಬೇಡಿಕೊಂಡೆ. ಟ್ಯಾಕ್ಸ್ ರಿಲೀಫ್ ಕೊಡಿ ಎಂದು. 60 ಕೋಟಿ ರೂಪಾಯಿ ಟ್ಯಾಕ್ಸ್ ರಿಲೀಫ್ ಕೊಟ್ಟಿದ್ದಾರೆ, 100 ದಿವಸದ ಕಾರ್ಯಕ್ರಮ ಹಾಕಿ ಎಲ್ಲ ಆಫೀಸರ್ಸ್‌ಗೂ ಇದನ್ನು ಇಂಪ್ರೂವ್ ಮಾಡಬೇಕು ನೀವು ಸಹಕಾರಿ ಕೊಡಿ ಎಂದು ಕೇಳಿದೆ. ಎಂಡಿಯವರು ಇತರೆ ಅಧಿಕಾರಿಗಳು ಪ್ರಾಮಾಣಿಕವಾಗಿ 6 ತಿಂಗಳು ದುಡಿದರು. ನನಗೆ ಗೊತ್ತಿದೆ, ಅಲ್ಲಿರುವ ವೆಸ್ಟೆಡ್ ಇಂಟರೆಸ್ಟ್ ಯಾರ್ಯಾರು ಎಂದು ನಿಮ್ಮಲ್ಲಿ ಅನೇಕ ಜನರಿಗೆ ಗೊತ್ತಿದೆ. ಅವರು ಬಳಸುವ ಭಾಷೆ ಹಾಗಿದ್ದರೆ ಗೌರವ ಇರುವವರು ಅವರನ್ನು ಕರೆದು ಮಾತಾಡಲಿಕ್ಕೆ ಅವಕಾಶ ಕೊಡಬಾರದಿತ್ತು. ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಕರೆಸಿದ್ದರು, ಕಾನೂನು ಸಚಿವರಿದ್ದರು, ಪ್ರಕಾಶ ರವರು ಇದ್ದರು, ದಯವಿಟ್ಟು ನೋಡಿ ಅವರು ಏಕೆ ಈ ರೀತಿ ಮಾಡುತ್ತಿದ್ದಾರೆ ಎಂದು it is

all vested interest and money..and nothing else on this. ಅದರಿಂದಾಗಿ ನಾನು ವಿಶೇಷವಾಗಿ ಬಹಳ ನೋವಿನಿಂದ ಹೇಳುತ್ತಿದ್ದೇನೆ. ಈಗ ಬಜೆಟ್ ಅಧಿವೇಶನದಲ್ಲಿ ಆಗದೆ ಇರಬಹುದು, ಜೂನ್ ಜುಲೈನಲ್ಲಿ ಸೇರಿದಾಗ ಒಂದಲ್ಲ ಎರಡು ದಿವಸ ಈ ಸಂಸ್ಥೆ ಬಗ್ಗೆ ಚರ್ಚೆ ಮಾಡೋಣ. ಆಡಳಿತವೆಲ್ಲ ಪಾರದರ್ಶಕವಾಗಿದೆ, ನೀವು ಹೇಳಿರುವ ಎಲ್ಲ ಸಲಹೆಗಳನ್ನು ಕಾರ್ಯಗತಮಾಡಲು ನಾನು ತಯಾರಿದ್ದೇನೆ ಆದರೆ ನಾನು ಒಬ್ಬ ಮನುಷ್ಯ ಎನ್ನುವುದನ್ನು ದಯವಿಟ್ಟು ಎಲ್ಲರೂ ಅರ್ಥಮಾಡಿಕೊಳ್ಳಬೇಕೆಂದು ಬಹಳ ನೋವಿನಿಂದ ಹೇಳಬಯಸುತ್ತೇನೆ.

+ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಈ ಸದನದ ಅಥವಾ ಹೊರಗಡೆಯ ಶಾಸಕರಿಂದ ಯಾವುದೇ ಆತಂಕ ಉಂಟಾಗಿಲ್ಲವೆನ್ನುವುದಾದರೆ ನಾನು ತುಂಬ ಸಂತೋಷಪಡತಕ್ಕವನು ಮುಕ್ತವಾಗಿ ಕೆಲಸ ಮಾಡಲು ಸಾರಿಗೆ ಸಚಿವರಿಗೆ ಇವತ್ತು ಅವಕಾಶ ಲಭ್ಯವಾಗಿದೆ. ನಾನೂ ಅದೇ ರಸ್ತೆಯಲ್ಲಿ ಓಡಾಡುವಾಗ ಏನೇನು ಪೋಸ್ಟರ್ಸ್ ಹಚ್ಚಿದ್ದಾರೆ ಎಂದು ನೋಡಿದೆ, ನನಗೂ ವ್ಯಸನವಾಯಿತು, ಇಂತಹ ಪ್ರಸಂಗಗಳು ಬರುತ್ತವೆ ಅಂತೂ ಅದಕ್ಕೆ ಚಿಕಿತ್ಸೆ ಮಾಡುವ ಮುಕ್ತವಾತಾವರಣ ಇದೆಯೆಂದು ಇದರಿಂದ ಕಂಡುಬರುತ್ತಿದೆ. ನನ್ನ ಮುಂದೆ ಬಂದಂಥ ಪ್ರಸಂಗದ ಹಿನ್ನೆಲೆಯಲ್ಲಿ ನೆನಪುಮಾಡಿಕೊಟ್ಟಿನೇ ವಿನಃ ಮತ್ತೇನೂ ಅಲ್ಲ. ಮಾನ್ಯ ಹಿರಿಯ ಸದಸ್ಯರಾದ ಯಡಿಯೂರಪ್ಪನವರು ಇದಕ್ಕೆ ಒಂದು ಸಮಿತಿ ಮಾಡಿದರೆ ಚಿಕಿತ್ಸೆ ಕಂಡುಹಿಡಿಯಬಹುದು ಎಂದು ಹೇಳಿದ್ದಾರೆ. ಆ ಸಲಹೆಯನ್ನೂ ಸರ್ಕಾರ ಪರಿಶೀಲನೆ ಮಾಡಬಹುದು. ಒಟ್ಟಿನಲ್ಲಿ ಈ ಸಂಸ್ಥೆಗೆ ಒಳ್ಳೆಯದಾಗಿ ಒಳ್ಳೆಯ ಸೇವೆಯನ್ನು ಜನರಿಗೆ ಸಲ್ಲಿಸಬೇಕು. ಜೊತೆಗೆ ಒಂದನ್ನು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ : ಇವತ್ತು ಜನರು ಓಡಾಟ ಜಾಸ್ತಿಯಾಗಿದೆ, ಬಸ್‌ಗಳೂ ಜಾಸ್ತಿ ಬೇಕು ಆದರೆ ರಸ್ತೆಗಳು ಏನಾಗಿವೆ? ಡೀಸೆಲ್ ಜಾಸ್ತಿ ಬೇಕು, ಟೈರ್‌ಗಳು ಏಕೆ ಒಡೆದುಹೋಗುತ್ತವೆ ಎನ್ನುವುದಕ್ಕೆ ಕಾರಣ ಕಂಡುಹಿಡಿಯಬೇಕು. ೨೦ ವರ್ಷಗಳ ಹಿಂದೆ ಒಂದು ರೋಡ್‌ನಲ್ಲಿ ಎಷ್ಟು ಬಸ್ ಓಡಾಡುತ್ತಿದ್ದವು ಈಗೆಷ್ಟು ಓಡಾಡುತ್ತಿದೆ ಎಂದು ಲೆಕ್ಕಹಾಕಿದರೆ ಆ ಪ್ರಮಾಣದಲ್ಲಿ ಓಡಾಡತಕ್ಕ ಬಸ್‌ಗಳಿಗೆ ಯಥಾಸ್ಥಿತಿಯಲ್ಲಿ ರಸ್ತೆಗಳನ್ನು ಇಟ್ಟಿದ್ದೇವೆಯೇ ಎಂಬ ಪ್ರಶ್ನೆ ನಮ್ಮ ಮುಂದಿದೆ ಇದಕ್ಕೂ ಹೆಚ್ಚು ಲಕ್ಷ ಕೊಡಬೇಕಾಗುತ್ತದೆ, ಸರ್ಕಾರದ ವತಿಯಿಂದ ಅದನ್ನು ಈಗ ಪರಿಶೀಲನೆ ಮಾಡುವಂತಹ ಸಂದರ್ಭ ಬಂದಿದೆ. ವಿಶೇಷವಾಗಿ ನಮಗೆ ಆತಂಕ ಏನೆಂದರೆ ವರ್ಷಕ್ಕೊಮ್ಮೆ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ ನಡೆಯುವುದು, ಇದನ್ನು ಕಳೆದುಕೊಳ್ಳಬಾರದೆಂಬ ಅಪೇಕ್ಷೆ ನಮ್ಮ ಹೋರಾಟ ಯಶಸ್ವಿಯೂ ಆಗಬೇಕು, ಜೋತೆಗೆ ಆಯವ್ಯಯದ ಮೇಲೆ ನಡೆಯತಕ್ಕ ಸಾಮಾನ್ಯ ಚರ್ಚೆಯಲ್ಲಿ ನಾವೆಲ್ಲರೂ ಭಾಗವಹಿಸಬೇಕೆಂಬ ಒಂದೇಒಂದು ಅಪೇಕ್ಷೆ ನಮ್ಮ ಮನಸ್ಸಿನಲ್ಲಿ ಕಾಡುತ್ತಿತ್ತು. ಇವತ್ತು ಸೌಹಾರ್ದಯುತವಾಗಿ ಇದು ಬಗೆಹರಿದಿದ್ದರಿಂದ ಮುಂದಿನ ದಿನಗಳಲ್ಲಿ ನಾವು ಆಯವ್ಯಯದ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೂಡಿಬಂದಿದೆ. ಆ ಕಾರಣಕ್ಕಾಗಿ ಅಧ್ಯಕ್ಷರೇ ತಮಗೆ ಮತ್ತು ಸರ್ಕಾರಕ್ಕೆ ವಿಶೇಷವಾಗಿ ಕೃತಜ್ಞತೆ ಅರ್ಪಿಸುತ್ತೇವೆ ಈ ಮಾತನ್ನು ಹೇಳಿ ನನಗೆ ಅವಕಾಶಕೊಟ್ಟ ತಮಗೆ ವಂದಿಸುತ್ತೇನೆ.

ಶ್ರೀ ಜೆ.ಎಚ್. ಪಟೇಲ್ : ಎಜಿಟೇಶನ್‌ನಲ್ಲಿ ಶಾಂತಿಯುತವಾಗಿ ಪ್ರತಿಭಟನೆ ಮಾಡಿದವರ ಮೇಲೆ ಕೇಸ್ ಹಾಕಿದ್ದರೆ ಸಾಮಾನ್ಯವಾಗಿ ಅವನ್ನು ವಿಥ್‌ಡ್ರಾ ಮಾಡುತ್ತೇವೆ, ತಾತ್ವಿಕವಾಗಿ ನಾನು ಒಪ್ಪುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಕೇಸ್ ಹಾಕುವಾಗ ಪೋಲೀಸರು ಏನಾದರೂ ಬರೆಯಲೇಬೇಕಲ್ಲ. ಉದಾಹರಣೆಗೆ ಬೆಳಗಾಂ ಜಿಲ್ಲೆಯಲ್ಲಿ 22 ಹೆಂಗಸರು ಸೇರಿ 112 ಜನ ಜೈಲಿನಲ್ಲಿದ್ದರು. ಅಲ್ಲಿ ಸಣ್ಣ ಒಂದು ಘಟನೆಯೂ ನಡೆದಿಲ್ಲ. ಇಂಥಾದ್ದು ಬಳ್ಳಾರಿ, ಬಿಜಾಪುರದಲ್ಲಿ ನಡೆದಿವೆ. ಅವನ್ನು ವಿಥ್‌ಡ್ರಾ ಮಾಡಿಕೊಳ್ಳಿ ಅಂತ ಅಷ್ಟೆ.

ಅಧ್ಯಕ್ಷರು : ಗೌರವಾನ್ವಿತ ಸದಸ್ಯರುಗಳೇ, ಮಾನ್ಯ ಸಭಾ ನಾಯಕರು ಜನರ ದಿನನಿತ್ಯದ ಜೀವನಕ್ಕೆ ಸಂಬಂಧಿಸಿದ ವಿಷಯವೆಂದು ಹೇಳಿ ನಾನು ಸೋಲು-ಗೆಲುವನ್ನು ಪ್ರತಿಷ್ಠೆಯಾಗಿ ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲವೆಂದು ಪ್ರತಿಪಕ್ಷಗಳ ಬೇಡಿಕೆಗಳಿಗೆ ಸ್ಪಂದಿಸಿ ಉಂಟಾಗಿದ್ದ ಉದ್ವಿಗ್ನತೆಯನ್ನು ಸುಧಾರಿಸುವುದರಲ್ಲಿ ಸಹಕರಿಸಿದ್ದಾರೆ, ಇದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಮಾನ್ಯ ಹಿರಿಯ ಸದಸ್ಯರು ಹೆಚ್. ಎನ್. ನಂಜೇಗೌಡರು ಒಂದರೆಡು ಒಳ್ಳೆಯ ಮಾತುಗಳನ್ನಾಡಿದ್ದಾರೆ. ಅವರ ಅನುಭವ ದೊಡ್ಡದು. ಅವರು ಈ ಸದನದಲ್ಲಿ 1967ನೇ ಇಸವಿಯಲ್ಲಿದ್ದಾಗ ಆಗ ನಾನು ವೋಟ್ ಹಾಕುವ ಹಕ್ಕನ್ನು ಕೂಡ ಪಡೆದುಕೊಂಡಿರಲಿಲ್ಲ. ಅಲ್ಲದೆ, ನಂತರ ಅವರು ಸುಮಾರು ಹತ್ತು ವರ್ಷಗಳ ಕಾಲ ಲೋಕಸಭಾ ಸದಸ್ಯರೂ ಆಗಿದ್ದರು. ಈ ಸಂದರ್ಭದಲ್ಲಿ ಶುದ್ಧ ಅಂತಃಕರಣದಿಂದ ಅವರು ಹೇಳಿರುವ ಹಿತವಚನವನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ ಎಂದಷ್ಟೇ ಹೇಳಲು ಇಷ್ಟಪಡುತ್ತೇನೆ. ಇನ್ನು ಊಟಕ್ಕೆ ಸಂಬಂಧಿಸಿದಂತೆ ಪತ್ರಿಕಾ ಪ್ರತಿನಿಧಿಗಳಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ವಿಧಾನ ಸಭೆಯ ಎರಡೂ ಮೊಗಸಾಲೆಗಳಲ್ಲಿ ಮತ್ತು ಈ ಸಭೆ ನನ್ನ ಅಂದರೆ ಸಭಾಧ್ಯಕ್ಷರ ಆಡಳಿತ ವ್ಯಾಪ್ತಿಯೊಳಗೆ ಬರತಕ್ಕಂಥಾದ್ದು. ಯಾವುದೋ ಒಂದು ಕಾರಣಕ್ಕೆ ಇಲ್ಲಿ ಒಂದು ಸಮಸ್ಯೆಯುಂಟಾಗಿ ನನ್ನ ಸಹೋದ್ಯೋಗಿಗಳಾದ ಸನ್ಮಾನ್ಯ ಸದಸ್ಯರುಗಳು ಇಲ್ಲಿದ್ದಾಗ ಅವರ ಕ್ಷೇಮ ನೋಡಿಕೊಳ್ಳುವ ಜವಾಬ್ದಾರಿ ನನ್ನ ಮೇಲಿರುತ್ತದೆ. ಅದಕ್ಕಾಗಿ ಊಟದ ವ್ಯವಸ್ಥೆಯನ್ನು ವಿಧಾನಮಂಡಲದ ಖರ್ಚಿನಿಂದ ನಾನು ಮಾಡಿಸಿದ್ದೆ. ಇದಲ್ಲದೆ, ಒಬ್ಬ ವೈದ್ಯರನ್ನೂ ಕೂಡ ಇಲ್ಲಿ ಇಟ್ಟಿದ್ದೆ. ಏಕೆಂದರೆ, ವಯಸ್ಸಾದವರು ಇಲ್ಲಿರುವುದರಿಂದ ಒಂದು ವೇಳೆ ಯಾರಿಗಾದರೂ ತೊಂದರೆಯುಂಟಾದಲ್ಲಿ ನಾನು ರಿಸ್ಕ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆನ್ನುವ ದೃಷ್ಟಿಯಿಂದ ಆ ವ್ಯವಸ್ಥೆ ಮಾಡಿದ್ದೇನೆ. ಪತ್ರಿಕಾ ವರದಿಗಾರರು ತಮ್ಮ ಅಭಿಪ್ರಾಯಕ್ಕೆ ತಕ್ಕಂತೆ ವರದಿಗಳನ್ನು ಸಲ್ಲಿಸುವುದಕ್ಕೆ ನಮ್ಮದೇನೂ ಅಭ್ಯಂತರವಿರುವುದಿಲ್ಲ. ಆದರೆ, ಅದಕ್ಕೆ ಬೇರೆ ಒಂದು ರೂಪ ಕೊಟ್ಟಾಗ ನಾವು ಜನರಿಂದ ತೀರಾ ಲಘುವಾಗಿ ಕಾಣಲ್ಪಡುತ್ತೇವೆ. ಜನರ ದೃಷ್ಟಿಯಲ್ಲಿ ನಾವು ಲಘುವಾಗಿದ್ದೇವೆ, ನಿಜ, ಇಲ್ಲವೆಂದು ಹೇಳುವುದಿಲ್ಲ. ಆದರೆ, ನಮ್ಮನ್ನು ಲಘುವಾಗಿ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳುತ್ತಾ ಮತ್ತೊಮ್ಮೆ ತಮಗೆಲ್ಲರಿಗೂ ವಂದಿಸುತ್ತಾ ಈಗ ಸಭೆ ಮುಂದೂಡಿ ಪುನಃ ನಾಳೆ ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಸಂಜೆ 6 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 21ನೇ ಮಾರ್ಚಿ ಮಾಹೆ 1997ರ ಶುಕ್ರವಾರದಂದು ಬೆಳಿಗ್ಗೆ 10.00ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)